# 7

# ಯೇಸುವಿನ ಶೋಧನೆಗಳು

## (4:1-11)

ಯೇಸುವಿನ ದೈವಿಕ ಕುಮಾರತ್ವವನ್ನು ದೇವರು ಪ್ರಕಟಿಸಿದ ನಂತರ (3:17), ಶೋಧಿಸಲ್ಪಡುವದಕ್ಕಾಗಿ ಕ್ರಿಸ್ತನು ಅಡವಿಗೆ ನಡಿಸಲ್ಪಟ್ಟನು. ಶ್ರೇಷ್ಟವಾದ ಆತ್ಮೀಕ ಅನುಭವ ಹೊಂದಿದ ತಕ್ಷಣವೇ ಶೋಧನೆ ಎದುರಾಗುತ್ತದೆ.[1] ಯೇಸು ತನ್ನ ಸೇವೆ ಪ್ರಾರಂಭ ಮಾಡಲಿರುವಾಗ ಅರಣ್ಯದಲ್ಲಿನ ಈ ಶೋಧನೆಗಳು ಆತನ ಗುಣಗಳನ್ನು ರುಜುವಾತು ಮಾಡಲು ಸಹಾಯಕರವಾಗಿವೆ. "ದೇವರ ಮಗನಾಗಿರುವದು ಅಂದರೆ ಅರ್ಥವೇನು?" ಎನ್ನುವ ಪಶ್ನೆಗೆ ಈ ವೃತ್ತಾಂತವು ಉತ್ತರಿಸುತ್ತದೆ. ಎಷ್ಟೇ ಕಷ್ಟಗಳು ಎದುರಾದರು ಎಲ್ಲಾ ವಿಷಯಗಳಲ್ಲಿ ಯೇಸು ದೇವರಿಗೆ ವಿಧೇಯನಾಗಿ ನಂಬಿಗಸ್ತನಾಗಿರುವುದು ನಿಜವಾದ ಕುಮಾರತ್ವಕ್ಕೆ ಆವಶ್ಯಕವಾಗಿದೆ. "ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು" ಎಂದು ಇಬ್ರಿಯ ಬರಹಗಾರನು ಹೇಳಿದ್ದಾನೆ (ಇಬ್ರಿಯ 5:8).

ಯೇಸುವಿನ ಶೋಧನೆಯ ಕಥೆಯಲ್ಲಿ, ಇಸ್ರಾಯೇಲರನ್ನು ಐಗುಪ್ತದಿಂದ ಹೊರಗೆ ಕರೆದು ವಾಗ್ದಾನ ದೇಶಕ್ಕೆ ನಡೆಸಿರುವ ಮೋಶೆಯ ಕಥೆಗೆ ಅನೇಕ ಅಂಶಗಳು ಹೋಲಿಕೆಯಾಗುತ್ತವೆ ಈ ಇಬ್ಬರು ವ್ಯಕ್ತಿಗಳು ಅಡವಿಗೆ ನಡೆಸಲ್ಪಟ್ಟರು (4:1; ವಿಮೋಚನಕಾಂಡ 19:1, 2), ನಲವತ್ತು ದಿವಸ ಹಗಲಿರಳು ಉಪವಾಸವಿದ್ದರು (4:2; ವಿಮೋಚನಕಾಂಡ 34:28; ಧರ್ಮೋಪದೇಶ ಕಾಂಡ 9:9), ಮತ್ತು ಎತ್ತರವಾದ ಬೆಟ್ಟಗಳಿಂದ ರಾಜ್ಯಗಳನ್ನು ತೋರಿಸಲಾಯಿತು (4:8; ಧರ್ಮೋಪದೇಶಕಾಂಡ 3:27; 34:1-4).[2] ಆದಾಗ್ಯೂ, ಯೇಸು ಮತ್ತು ಇಸ್ರಾಯೇಲ್ ಜನರು, ನಲವತ್ತು ವರ್ಷಗಳು ಅರಣ್ಯದಲ್ಲಿ ಅಲೆದಾಡಿದ ವಿಷಯದ ಮಧ್ಯ ಒಂದು ದೊಡ್ಡ ಸಂಬಂಧವನ್ನು ನೋಡುತ್ತೇವೆ. ಯೇಸುವಿಗೆ ಎದುರಾದ ಪರೀಕ್ಷೆ ಮತ್ತು ಇಸ್ರಾಯೇಲ್ಯರ ಮಧ್ಯದ ಸಂಬಂಧವನ್ನು Douglas R. A. Hare ರವರು ಗಮನಿಸಿರುವ ವಿವರ ಹೀಗಿದೆ:

> ಮತ್ತಾಯ ಬರೆದ ಮೂರು ಶೋಧನೆಗಳು ಇಸ್ರಾಯೇಲ್ಯರು ಎದುರಿಸಿದ ಮೂರು ಶೋಧನೆಗಳನ್ನು ಕಾಲಾನು ಪ್ರಕಾರ ಪ್ರತಿಬಿಂಬಿಸುತ್ತದೆ. ದೇವರು ಇಸ್ರಾಯೇಲನ್ನು ನನ್ನ "ಮಗ"ನೆಂದು ಕರೆದನು (ಹೋಶೇಯ 11:1; ನೋಡಿರಿ ಧರ್ಮೋಪದೇಶಕಾಂಡ 8:5), ಪ್ರತಿಯೊಂದು ಪರೀಕ್ಷೆಯಲ್ಲಿ ಸೋತು ಹೋದರು, ಆದರೆ ಯೇಸು ಎಲ್ಲಾ ಪರೀಕ್ಷೆಗಳಿಗೆ ದೃಢವಾದ ನಂಬಿಕೆಯಿಂದ ದೇವಕುಮಾರನಾಗಿರಲು ಯೋಗ್ಯನು ಎಂದು ತೋರಿಸಿದನು.[3]

R. T. France ರವರ ಇನ್ನೊಂದು ವಿವರಣೆ ಹೀಗಿದೆ. "ಯೇಸು ನಿಜವಾದ ಇಸ್ರಾಯೇಲನೆಂಬ ಭಾವನೆ ಮತ್ತಾಯನು 2:15ರಲ್ಲಿ ಈಗಾಗಲೇ ದೃಢಪಡಿಸಲಾಗಿದೆ, ಈ ಶೋಧನೆಗಳಲ್ಲಿ ಇನ್ನೂ ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.[4]

### ಪೀಠಿಕೆ (4:1, 2)

**[1]ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು. [2]ಆತನು ನಾಲ್ವತ್ತು ದಿವಸ ಹಗಲಿರಳು ಉಪವಾಸವಿದ್ದ ತರುವಾಯ ಆತನಿಗೆ ಹಸಿವಾಯಿತು.**

**ವಚನ 1.** ಆತನ ದೀಕ್ಷಾಸ್ನಾನದ ಸುತ್ತಲಿರುವ ಮರೆಯಲಾರದ ಘಟನೆಗಳನ್ನು ಹಿಂಬಾಲಿಸಿ (3:13-17), **ಯೇಸು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು,** ಅಲ್ಲಿ ಆತನು ಶೋಧನೆಯ ಪರೀಕ್ಷೆಯನ್ನು ಸಹಿಸಿಕೊಂಡನು. "ಕೂಡಲೆ ಯೇಸು ದೇವರಾತ್ಮ ಪ್ರೇರಿತನಾಗಿ ಅಡವಿಗೆ ಹೋದನು" ಎಂದು ಮಾರ್ಕನು ಬರೆದಿದ್ದಾನೆ (ಮಾರ್ಕ 1:12). ಯೇಸು "ದೇವರಾತ್ಮನಿಂದ ಅಡವಿಯಲ್ಲಿ ನಡಿಸಲ್ಪಡುತ್ತಾ ಇದ್ದನು" ಎಂದು ಲೂಕನು ಹೇಳಿದ್ದಾನೆ (ಲೂಕ 4:1).

ಯೇಸು ಯೋರ್ದಾನ ಪ್ರಾಂತವನ್ನು ಬಿಟ್ಟು ಅರಣ್ಯದಲ್ಲಿ ಇನ್ನೊಂದು ಉನ್ನತವಾದ ಸ್ಥಾನಕ್ಕೆ ಹೋಗಿದ್ದಾನೆಂದು ಮತ್ತಾಯನು ಬರೆದ ವಿವರಣೆಯಲ್ಲಿ "ನಡಿಸಲ್ಪಟ್ಟನು" ಎನ್ನುವ ಕ್ರಿಯಾಪದವು ಸೂಚಿಸುತ್ತದೆ. ಈ ಅಡವಿಯ ನಿರ್ಧಿಷ್ಟವಾದ ಸ್ಥಳ ಯಾವುದೆಂದು ನಮಗೆ ಗೊತ್ತಿರುವದಿಲ್ಲ, ಯೆರೂಸಲೇಮಿನಿಂದ ಯೆರಿಕೊ ಮಧ್ಯೆದಲ್ಲೆಲ್ಲೋ ಒಂದು ಹಳತಿಟ್ಟಾದ ಪರ್ವತ ಶ್ರೇಣಿಯಲ್ಲಿ ಇರಬಹುದೆಂದು ಸಂಪ್ರದಾಯ ಹೇಳುತ್ತದೆ. ಈ ಬೆಟ್ಟದ ಸ್ಥಳವನ್ನು ಅನೇಕ ಬಾರಿ ಕ್ವಾರಂಟನಿಯಾ ಬೆಟ್ಟವೆಂದು ("ನಲವತ್ತು") ಕರೆಯಲಾಯಿತು. ಸ್ಥಳಿಯವಾಗಿ ಇದನ್ನು "ಶೋಧನೆಯ ಬೆಟ್ಟ" ಎಂದು ಹೇಳಲಾಗುತ್ತದೆ, ಈ ಸ್ಥಳವು ಯೆರಿಕೋ ಪಟ್ಟಣದ[5] ಪಶ್ಚಿಮ ಭಾಗದಲ್ಲಿ ಒಂದುವರೆ ಮೈಲುದೂರದಲ್ಲಿದೆ.

ಪವಿತ್ರಾತ್ಮನು ಯೇಸು ಸೈತಾನನಿಂದ **ಶೋಧನೆಗೆ** ಒಳಗಾಗಲು ಆತನು ಅರಣ್ಯದಲ್ಲಿ ನಡೆಸಲ್ಪಟ್ಟನು. ಸನ್ನಿವೇಶದ ಮೇಲೆ ಆತುಕೊಳ್ಳುವಾಗ, ಗ್ರೀಕ್ ಭಾಷೆಯ ಕ್ರಿಯಾಪದವು "ಪರೀಕ್ಷೆ, ಪ್ರಯೋಗ" ಅಥವಾ "ಶೋಧನೆ, ಮರಳುಮಾಡು"ವದನ್ನು ಸೂಚಿಸುತ್ತದೆ.[6] ಇಲ್ಲಿ ದುಷ್ಟನು ಪರೀಕ್ಷೆ ಮಾಡಲು ಕಾರ್ಯಬಾರಿಯಾಗಿದ್ದನು, ಮತ್ತು ಯೇಸು ದುಷ್ಟಕಾರ್ಯ ಮಾಡುವದಕ್ಕಾಗಿ ಶೋಧನೆ ಮಾಡಲ್ಪಟ್ಟಿತೆಂದು ಇದು ತಿಳಿಸುತ್ತದೆ.[7] ದೇವರು ಜನರನ್ನು ಪರೀಕ್ಷೆ ಮಾಡುವಾಗ, ದೇವರು ಕೆಟ್ಟದ್ದನ್ನು ಮಾಡಲು ಶೋಧಿಸುವುದಿಲ್ಲ (ಯಾಕೋಬ 1:13). ಆತನು ಜನರನ್ನು ಪರೀಕ್ಷಿಸಲು ಸೈತಾನನಿಗೆ ಅವಕಾಶ ಕೊಡುತ್ತಾನೆ, ಆದರೆ ಆತನು ಯಾವಾಗಲು ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು (1 ಕೊರಿಂಥ 10:13).

ಯೇಸುವಿನ ಶೋಧನೆಯು ದೇವರ ಚಿತ್ತದ ಪ್ರಕಾರವಾಗಿದೆ. ಈ ಸೈತಾನನನ್ನು ಎದುರಿಸುವದು ಆಕಸ್ಮಿಕವಾದದಲ್ಲ; ಅದು ಪೂರ್ವಯೋಜಿತ ಮತ್ತು ರಚಿಸಲ್ಪಟ್ಟದ್ದಾಗಿತ್ತು. ಯೇಸು ಎಲ್ಲಿ ಸಿಕ್ಕಬಹುದು ಎಂದು ಸೈತಾನನಿಗೆ ಗೊತ್ತಿತ್ತು, ಮತ್ತು ಹೇಗೂ ಸೈತಾನನು ಯಾವುದೋ ರೀತಿಯಲ್ಲಿ ತನ್ನಲ್ಲಿಗೆ ಬರಬಹುದೆಂದು ಯೇಸುವಿಗೆ ತಿಳಿದಿತ್ತು. ದೇವರಿಂದ ನೇಮಿಸಲ್ಪಟ್ಟ ಕೆಲಸವನ್ನು ಯೇಸು ಮಾಡಲು "ಆತನು ಪರೀಕ್ಷಿಸಲ್ಪಟ್ಟು ಮತ್ತು ಸಾಭೀತು ಮಾಡಲ್ಪಡುವದಕ್ಕಾಗಿ" ಯೇಸು ಶೋಧಿಸಲ್ಪಡುವದು ಅವಶ್ಯವಾಗಿತ್ತು[8] (ನೋಡಿರಿ ಇಬ್ರಿಯ 4:15).

ಶೋಧಕನಿಗೆ **ದೆವ್ವ** ಎಂದು ಸೂಚಿಸಲಾಗಿದೆ (*diabolos*) ಇದರರ್ಥ "ಅಪವಾದಕ" ಅಥವಾ "ಆರೋಪಿಸುವವನು." 4:10ರಲ್ಲಿ, ಯೇಸು ಅವನಿಗೆ "ಸೈತಾನನೇ" ಎಂದು ಕರೆದನು; ಮತ್ತು ಯೋಬ 1:6-11ರಲ್ಲಿ, "ವಿರೋಧಿ" ಅಥವಾ "ಸೈತಾನ" ಯೋಬನ ವಿರೋಧವಾಗಿ ಅರೋಪಿಸಿದವನು. "ನಮ್ಮ ಸಹೋದರರ ಮೇಲೆ ದೂರು ಹೇಳಿದ ದೂರುಗಾರನು ... ಹಗಲಿರಳು ನಮ್ಮ ದೇವರ ಮುಂದೆ ದೂರನ್ನು ಹೇಳಿದವನು" ಎಂದು ಯೋಹಾನನು ಹೇಳುತ್ತಾನೆ (ಪ್ರಕಟನೆ 12:10). ಆತನು ಬೆಲ್ಜೆಬೂಲನು (ಅಥವಾ ಬೆಲ್ಜೆಬೂಬ), ದೆವ್ವಗಳನ್ನು ಆಳುವವನು (ಮತ್ತಾಯ 12:24; ಮಾರ್ಕ 3:22). ಅವನು ಹಾವಿನಂತೆ ವರ್ಣಿಸಲ್ಪಟ್ಟಿದ್ದಾನೆ (ಆದಿಕಾಂಡ 3:1-5; 2 ಕೊರಿಂಥ 11:3; ಪ್ರಕಟಣೆ 20:2), "ಗರ್ಜಿಸುವ ಸಿಂಹ" (1 ಪೇತ್ರನು 5:8), ಮತ್ತು "ಕೆಂಪಾದ ಮಹಾ ಘಟಸರ್ಪ" (ಪ್ರಕಟಣೆ 12:3). ಅವನು ತನ್ನನ್ನು ತಾನೇ "ಪ್ರಕಾಶರೂಪವುಳ್ಳ ದೇವದೂತನ" ಹಾಗೆ ವೇಷಧರಿಸುವನೆಂದು ಸತ್ಯವೇದ ಎಚ್ಚರಿಸುತ್ತದೆ (2 ಕೊರಿಂಥ 11:14). ಸೈತಾನನು "ಇಹಲೋಕಾಧಿಪತಿ" ಎಂದು

ಯೇಸು ಕರೆದಿದ್ದಾನೆ (ಯೋಹಾನ 16:11). ಪೌಲನು ಇವನನ್ನು ಕುರಿತು ಹೀಗೆ ಹೇಳಿದ್ದಾನೆ, "ಈ ಪ್ರಪಂಚದ ದೇವರು" (2 ಕೊರಿಂಥ 4:4) ಮತ್ತು "ವಾಯು ಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿ" (ಎಫೆಸ 2:2) ಎಂದು ಸೂಚಿಸಿದನು.

**ವಚನ 2.** ಶೋಧಕನೊಂದಿಗೆ ಸಂಧಿಸುವ ಸಿದ್ಧತೆಯಲ್ಲಿ, ಯೇಸು **ನಾಲ್ವತ್ತು ದಿವಸ ಹಗಲು ಮತ್ತು ಇರಳು ಉಪವಾಸ ಮಾಡಿದನು.** ಲೂಕನು ಇದನ್ನು ತುಂಬಾ ಸರಳವಾಗಿ ಹೇಳಿದ್ದಾನೆ, "ಆ ದಿವಸಗಳಲ್ಲಿ ಆತನು ಏನು ತಿನ್ನಲಿಲ್ಲ" (ಲೂಕ 4:2). ಈ ಅವಧಿಯ ಉಪ ವಾಸವು ಹಳೆ ಒಡಂಬಡಿಕೆಯ ಇಸ್ರಾಯೇಲ್ಯರ ಮಹಾನಾಯಕರ ಉಪವಾಸಕ್ಕೆ ಅನುರೂಪತೆ ತೋರಿಸುತ್ತದೆ. ಮೋಶೆ ಸಿನಾಯಿ ಬೆಟ್ಟದ ಮೇಲೆ ಧರ್ಮಶಾಸ್ತ್ರವನ್ನು ಹೊಂದುವ ಮೊದಲು ಹಗಲಿರಳು ನಾಲ್ವತ್ತು ದಿವಸ ಉಪವಾಸ ಮಾಡಿದನು (ವಿಮೋಚನಕಾಂಡ 34:28; ಧರ್ಮೋಪದೇಶಕಂಡ 9:9; 10:10). ಕರ್ಮೆಲ್ ಬೆಟ್ಟದ ಮೇಲೆ ಬಾಳನ ಪ್ರವಾದಿಗಳನ್ನು ಸೋಲಿಸಿದಾಗ ಈಜೆಬೆಲಳ ಕೋಪಕ್ಕೆ ಗುರಿಯಾಗಿ ಅಲ್ಲಿಂದ ತಪ್ಪಿಸಿಕೊಂಡು ಹೋದ ನಾಲ್ವತ್ತು ದಿವಸ ಹಗಲಿರಳು ಪ್ರಯಾಣದುದ್ದಕ್ಕೂ ಎಲೀಯನು ಉಪವಾಸವಿದ್ದನು (1 ಅರಸುಗಳು 19:8). ಈ ಪ್ರತಿಯೊಂದು ಘಟನೆಗಳಲ್ಲಿ ಆತ್ಮೀಕ ಕಾರಣಕ್ಕಾಗಿ ಅವರು ಉಪವಾಸ ಮಾಡಿದರು. ಆತನ ಸೇವೆಗಾಗಿ ಮತ್ತು ಶೋಧಕನನ್ನು ಸಂಧಿಸುವ ಸಿದ್ಧತೆಗಾಗಿ ವಾಸ್ತವಿಕತೆಗೆ ತಕ್ಕಂತೆ ಯೇಸು ಉಪವಾಸ ಮಾಡಿದನು.

ಯೇಸು ಉಪವಾಸವಿದ್ದುದರ ಫಲವಾಗಿ **ತರುವಾಯ ಆತನಿಗೆ ಹಸಿವಾಯಿತು.** ಹಸಿವು ದೈಹಿಕವಾಗಿ ಬಲಹೀನತೆ ಮಾಡುತ್ತದೆ, ಮತ್ತು ಇನ್ನೊಂದು ಕಾರಣ ಆತನ ಗಮನವನ್ನು ಆಹಾರದ ಮೇಲೆ ಗಮನ ಹರಿಸುವಂತೆ ಮಾಡುತ್ತದೆ, ಇನ್ನೂ ಅನೇಕ ಅಂಶಗಳ ಕುರಿತು ಅಲಕ್ಷಮಾಡುವಂತೆ ಮಾಡಲು ಇದು ಕಾರಣವಾಗುತ್ತದೆ - ಆತ್ಮೀಕ ಅವಶ್ಯಕತೆಗಳು[9] ಒಳಗೊಂಡು. ಯೇಸು ಕೇವಲ ಹಸಿವೆಯಿಂದ ಮಾತ್ರ ಇರಲಿಲ್ಲ, ಆದರೆ ಆತನು ಅರಣ್ಯದಲ್ಲಿ ಅಪಾಯಕ್ಕೆ ಒಳಗಾದನು. ಯೇಸು "ಕಾಡು ಮೃಗಗಳೊಂದಿಗೆ" ಇದ್ದನೆಂದು ಮಾರ್ಕನು ವಿವರಿಸುತ್ತಾನೆ (ಮಾರ್ಕ 1:13).

## ಪ್ರಥಮ ಶೋಧನೆ (4:3, 4)

**3 ಆಗ ಆ ಶೋಧಕನು ಆತನ ಬಳಿಗೆ ಬಂದು - ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು ಎಂದು ಹೇಳಲು ಆತನು - 4 ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಬರದದೆ ಅಂದನು.**

**ವಚನ 3.** ಯೇಸು ಹಸಿವಿನಿಂದ ಬಲಹೀನಗೊಂಡಾಗ, ಸೈತಾನನು ಬಂದು ಆತನನ್ನು ಎದುರಿಸಿದನು. ಮತ್ತಾಯನು ಈತನನ್ನು **ಶೋಧಕನೆಂದು** ಚಿತ್ರಿಕರಿಸಿದ್ದಾನೆ, ಸೈತಾನನ ಮುಖ್ಯ ಉದ್ದೇಶ ಆತನಿಗೆ ಅಹುತಿ ಆದವರನ್ನು ದುಷ್ಟಕಾರ್ಯವನ್ನು ಮಾಡಲು ಪ್ರೇರೇಪಿಸುವದ್ದಾಗಿತೆಂದು ಸೂಚಿಸುತ್ತದೆ (ನೋಡಿರಿ 1 ಕೊರಿಂಥ 7:5; 10:13; 1 ಥೆಸಲೋನಿಕ 3:5). ಈ ನಿರ್ಧಿಷ್ಟವಾದ ಸಂದರ್ಭದಲ್ಲಿ ಸೈತಾನನು ಯಾವುದೇ ರೀತಿಯ ಭೌತಿಕ ರೂಪವನ್ನು ಹೊಂದಿದ್ದಾನೆಂದು ಇಲ್ಲಿಕೊಡಲ್ಪಟ್ಟ ವಾಕ್ಯಭಾಗದಲ್ಲಿ ಯಾವುದೇ ಸೂಚನೆಗಳಿಲ್ಲ.

ಸೈತಾನನು ಯೇಸುವಿಗೆ ಮೆಚ್ಚಿಸುತ್ತಾ ದೇವರು ಮಾತಾಡಿರುವ ಮಾತುಗಳನ್ನು ವ್ಯತಿರಿಕ್ತವಾಗಿ ಹೇಳಿ ಚುಚ್ಚಿ ಮಾತಾಡುತ್ತಿದ್ದಾನೆ (ನೋಡಿರಿ 3:17). ಅವನು, **ನೀನು ದೇವರ ಮಗನಾಗಿದ್ದರೆ** ... ಎಂದು ಹೇಳಿದ್ದಾನೆ. ವಾಕ್ಯ ರಚನೆಯಲ್ಲಿ ಅದರ ಅರ್ಥವು ಶೋಧಕನು ಯೇಸುವಿನ ಅಧಿಕಾರಕ್ಕೆ ಸಂಬಂಧಿಸಿದ ವಿಷಯದ ಮೇಲೆ ದಾಳಿಮಾಡಿದನು. "ನೀನು

ದೇವಕುಮಾರನು ಆಗಿರುವ ದಿನದಿಂದ ನೀನು ಏನು ಮಾಡಬಹುದೆಂದು ತೋರಿಸು'' ಸೈತಾನನು ಬಾವಿಸಿದನೆಂದು ಗ್ರೀಕ್ ಭಾಷೆಯ ವಾಕ್ಯ ರಚನೆಯ ಅವಕಾಶಕೊಡುತ್ತದೆ.

ಯೇಸು ಯಾವಾಗ ದೈಹೀಕವಾಗಿ ಬಲಹೀನನಾದನೋ ಆಗ ಸೈತಾನನು ಆತನ ಹತ್ತಿರ ಬಂದನು. ಜನರು ಬಹಳ ಬಲಹೀನವಾಗಿರುವ ಸಮಯದಲ್ಲಿ ಅವರ ಮೇಲೆ ದಾಳಿಮಾಡಲು ಸೈತಾನನು ಹುಡುಕುತ್ತಾನೆ. ಯೇಸು ವಿಪರೀತ ಹಸಿವಿನಿಂದ ಇರುವಾಗ ಆತನ ಮೇಲೆ ಆಕ್ರಮಿಸಿ, **ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು** ಎಂದು ಹೇಳಿದನು. ಕಾಡಿನಲ್ಲಿ ಬಹಳಷ್ಟು ಕಲ್ಲುಗಳು ಇರುತ್ತವೆ (ನೋಡಿರಿ 3:9), ಯೇಸು ತಿನ್ನುತ್ತಿರುವ ರೊಟ್ಟಿಯಂತೆ ಕೆಲವು ಕಲ್ಲುಗಳು ಅಂಥಹ ರೂಪ ಹೊಂದಿದ್ದವು (ನೋಡಿರಿ 7:9). ಕಲ್ಲನ್ನು ರೊಟ್ಟಿಯಂತೆ ಮಾಡಲು ಯೇಸುವಿಗೆ ಸರಳವಾದ ಕಾರ್ಯವಾಗಿತ್ತು. ನಂತರದ ಸಮಯದಲ್ಲಿ ಆತನು ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದನು, ಮತ್ತು ಕೆಲವು ರೊಟ್ಟಿಗಳಿಂದ ಮತ್ತು ಕೆಲವು ಮೀನು ತುಂಡುಗಳಿಂದ ಅನೇಕ ಜನರ ಗುಂಪಿಗೆ ಊಟಮಾಡಿಸಿದನು (ಯೋಹಾನ 2:6-11; ಮತ್ತಾಯ 14:13-21; 15:32-38). ದೇವರ ಒದಗಿಸುವಿಕೆಯಲ್ಲಿ ಅಪನಂಬಿಕೆಗೆಯಿಡಲು ಸೈತಾನನು ಯೇಸುವನ್ನು ನಡಿಸಲು ಪ್ರಯತ್ನಿಸಿದನು.

**ವಚನ 4.** ಈ ಶೋಧನೆಗಳನ್ನು ತಡೆಯಲು ಆತನು ದೈವೀಕ ಶಕ್ತಿಯನ್ನು ಉಪಯೋಗಿ ಸುವ ಬದಲು, ಯೇಸು ಅವುಗಳನ್ನು ಎದುರಿಸಿದ ರೀತಿಯಲ್ಲಿ ಪ್ರತಿಯೊಬ್ಬ ಮಾನವರು ದೇವರ ವಾಕ್ಯದ ಬಲದ ಮೇಲೆ ಅವಲಂಭಿಸುವದಕ್ಕಾಗಿ ಹೀಗೆಯೇ ಮಾಡಬೇಕು. ಪ್ರತಿಯೊಂದು ಶೋಧನೆಗಳಿಗೆ ಯೇಸು ದೇವರ ವಾಕ್ಯದಿಂದಲೇ ಉತ್ತರಿಸಿದನು: **ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವುದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಬರೆದಿದೆ.** ಆತನ ಹೇಳಿಕೆಯು ಸೆಪ್ಟುಂಜೆಟಿನ ಧರ್ಮೋಪದೇಶಕಾಂಡ 8:3ರಿಂದ ಬಂದಿರುತ್ತದೆ. ಈ ವಾಕ್ಯ ಭಾಗವು ದೇವರ ''ಮಗನಾದ'' ಇಸ್ರಾಯೇಲನ್ನು (ವಿಮೋಚನಕಾಂಡ 4:22). ದೇವರ ಒದಗಿಸುವಿಕೆಯ ಮೇಲೆ ಆಶ್ರಯಿಸಬೇಕೆಂದು ದೇವರು ಅವನಿಗೆ ಕಲಿಸಿರುವ ಉಪದೇಶಕ್ಕೆ ಸೂಚನೆಯಾಗಿದೆ (ವಿಮೋಚನಕಾಂಡ 16; ನೋಡಿರಿ ಕೀರ್ತನೆ 78:17-20). ದೇವರ ಜನರು ಐಗುಪ್ತ ಬಿಟ್ಟು ಹೊರಟ ನಂತರ, ಅರಣ್ಯದಲ್ಲಿ ಅವರು ಉಪವಾಸದಿಂದಿರುವಂತೆ ಅನುಮತಿ ಕೊಟ್ಟು ಅವರ ವಿಶ್ವಾಸವನ್ನು ಆತನು ಪರಿಕ್ಷಿಸಿದನು. ಅವರು ಮೋಶೆ ಮತ್ತು ಆರೋನನ ವಿರುದ್ಧವಾಗಿ ಗೊಣಗುಟ್ಟಿದರು. ಅದರಲ್ಲಿ ಕೆಲವರು ಐಗುಪ್ತದಲ್ಲಿ ದಿನಾಲು ಊಟ ಇರುತ್ತಿದ್ದರಿಂದ ಹಿಂದಿರುಗಲು ಇಚ್ಛೆಯುಳ್ಳವರಾಗಿದ್ದರು. ಅವರು ಅಪನಂಬಿಕೆಯುಳ್ಳವರಾಗಿದ್ದಾಗ್ಯೂ, ದೇವರು ಕೃಪೆತೋರಿಸಿ ಪರಲೋಕದ "ಆಹಾರ'' ಮನ್ನವನ್ನು ಕಳುಹಿಸುವುದರ ಮುಖಾಂತರ ಅವರಿಗಾಗಿ ಖಾಳಜಿ ವಹಿಸಿದನು. ತನ್ನ ಜನರು ತನ್ನನ್ನು ನಂಬುವದಕ್ಕಾಗಿ ದೇವರು ಅವರಿಗೆ ಕಲಿಸುತಿದ್ದನು.

ಯೇಸು ಹಿಂದಿನ ಇಸ್ರಾಯೇಲರಂತೆ ಅಲ್ಲದೆ, ಆತನು ದೇವಕುಮಾರನಾಗಿ ನಿರ್ದಿಷ್ಟವಾದ ನಂಬಿಕೆಗೆ ರುಜುವಾತು ನೀಡಿದನು. ಆತನು ದೇವರ ವಿರುದ್ಧವಾಗಿ ಗೊಣಗುಟ್ಟಲಿಲ್ಲ ಇಲ್ಲವೆ ತಾನೇ ತನ್ನ ಕೈಗಳಿಂದ ಆ ಕಾರ್ಯ ಮಾಡಲಿಲ್ಲ. ಆತನಿಗೆ ದೀಕ್ಷಾಸ್ನಾನದ ಸಮಯದಲ್ಲಿ ಕೊಟ್ಟಿರುವ ಪವಿತ್ರಾತ್ಮನ ಬಲವನ್ನು ತನ್ನ ಸ್ವಪ್ರಯೋಜನಕ್ಕಾಗಿ ಉಪಯೋಗಿಸಲಿಲ್ಲ. ಅದರ ಬದಲಾಗಿ ಆತನು ತಗ್ಗಿಸಲ್ಪಟ್ಟವನ್ನಾಗಿ ದೇವರು ತನ್ನ ವಾಗ್ದಾನಗಳನ್ನು ನೆರವೇರಿಸುತ್ತಾನೆ ಮತ್ತು ತನ್ನ ಅವಶ್ಯಕತೆಗಳನ್ನು ಹೊದಗಿಸುತ್ತಾನೆಂದು ನಂಬಿದನು.

''ಕೇವಲ ರೊಟ್ಟಿ ತಿಂದು ಮಾತ್ರ ಬದುಕುವುದಿಲ್ಲ'' ಎಂಬ ವಾಕ್ಯವು ''ರೊಟ್ಟಿಯ ಪ್ರಾಮುಖ್ಯತೆಯನ್ನು ನಿರಾಕರಿಸಿಲ್ಲ (ಪಾಲೇಸ್ತಾನ ದೇಶಲ್ಲಿ 'ಆಹಾರಕ್ಕೆ' ಸಮಾನಾರ್ಥ ಪದವಾಗಿದೆ), ಆದರೆ ರೊಟ್ಟಿಯ ಏಕಮಾತ್ರ ಪ್ರಾಮುಖ್ಯತೆ ನಿರಾಕರಿಸಲಾಗಿದೆ. ಕೇವಲ ಆಹಾರದಿಂದ ಮಾತ್ರ ಜೀವನ ನಡಿಸುವವರ ಜೀವಿತ ಬಡತನದ ಜೀವಿತವಾಗಿದೆ''[10] ಎಂದು Leon Morris ರವರು ಸರಿಯಾದ ರೀತಿಯಲ್ಲಿ ಆ ಭಾಗವನ್ನು ವ್ಯಾಖ್ಯಾನಿಸಿದ್ದಾರೆ.

"ನನ್ನನ್ನು ಕಳುಹಿಸಿದಾತನ ಚಿತ್ತದಂತೆ ಮಾಡಿ ಆತನ ಕೆಲಸವನ್ನು ಪೂರೈಸುವುದೇ ನನ್ನ ಆಹಾರವಾಗಿದೆ" ಎಂದು ಯೇಸು ಹೇಳಿದ್ದಾನೆ (ಯೋಹಾನ 4:34). ಅಷ್ಟು ಮಾತ್ರವಲ್ಲದೆ, ಆತನು ತನ್ನ ಶಿಷ್ಯರಿಗೆ ಭೌತಿಕ ವಸ್ತುಗಳ ಹಿಂದೆ ಹೋಗಬೇಡಿರಿ (ಆಹಾರ, ನೀರು, ವಸ್ತ್ರಗಳು), ಆದರೆ ಅವರ ಹೃದಯದಲ್ಲಿ ದೇವರ ರಾಜ್ಯಕ್ಕೆ ಪ್ರಥಮ ಸ್ಥಾನ ಕೊಡಲು ಅವರಿಗೆ ಕಲಿಸಿದನು (6:31-33).

## ದ್ವಿತಿಯ ಶೋಧನೆ (4:5-7)

**5ಆಗ ಸೈತಾನನು ಆತನನ್ನು ಪರಿಶುದ್ಧ ಪಟ್ಟಣಕ್ಕೆ ಕರಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ - 6ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ದುಮುಕು;**
**ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ**
**ಅಪ್ಪಣೆ ಕೊಡುವನು;**
**ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು**
**ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು**
**ಎಂಬುದಾಗಿ ಬರೆದಿದೆಯಲ್ಲಾ ಎಂದು ಹೇಳಿದನು. 7ಅದಕ್ಕೆ ಯೇಸು - ನಿನ್ನ ದೇವರಾಗಿರುವ ಕರ್ತನನ್ನು ಪರೀಕ್ಷಿಸಬಾರದು ಎಂಬದಾಗಿ ಸಹ ಬರೆದದೆ ಅಂದನು.**

**ವಚನ 5.** ತರುವಾಯ, **ಸೈತಾನನು** ಯೇಸುವನ್ನು ಯೆರೂಸಲೇಮಿಗೆ ಕರಕೊಂಡು ಹೋದನು ಯೆರೂಸಲೇಮು **ಪರಿಶುದ್ಧ ಪಟ್ಟಣವೆಂದು** ಸೂಚಿಸಲಾಗಿದೆ (ನೋಡಿರಿ ನೆಹಮೀಯ 11:1, 18; ಯೆಶಾಯ 48:2; 52:1; ದಾನಿಯೇಲ 9:24; ಪ್ರಕಟಣೆ 11:2). ದಾವೀದನ ಕಾಲದಲ್ಲಿ ಯೆರೂಸಲೇಮ ಇಸ್ರಾಯೇಲನ ರಾಜಧಾನಿಯಾಗಿತ್ತು. ಅಂಥಹ ಸ್ಥಳದಲ್ಲಿ ಆತನ ಮಗನಾಗಿರುವ ಸಲ್ಮೋನನು ಸಜೀವ ದೇವರಿಗಾಗಿ ಪರಿಶುದ್ಧ ದೇವಾಲಯವನ್ನು ಕಟ್ಟಿಸಿದನು. ಆದುದರಿಂದ ದೇವರ ಪ್ರಸನ್ನತೆಯು ಆ ನಗರವನ್ನು "ಪರಿಶುದ್ಧ" ಗೊಳಿಸಿತ್ತು. ಪ್ರಕಟಣೆ ಪುಸ್ತಕ ಅಂತ್ಯ ಭಾಗದಲ್ಲಿರುವ ಈ ಭಾಷೆ ಇದನ್ನು ಪರಲೋಕದ ನಗರವೆಂದು ಅದು ಹೊಸ ಯೆರೂಸಲೇಮ ದೇವರ ನಿವಾಸವು ಆತನ ಜನರಲ್ಲಿಯೇ ಇದೆ ಎಂದು ಬದಲಾಯಿಸಲಾಗಿದೆ (ಪ್ರಕಟಣೆ 21:2, 10; 22:19).

ಮಾಡುವದಕ್ಕೆ ಕ್ರಿಸ್ತನ ಆರಿಸಿಕೊಳ್ಳದ ಯಾವ ಸಂಗತಿಗಳನ್ನು ಮಾಡಿಸಲು ಸೈತಾನನಿಗೆ ಬಲವಿಲ್ಲ. ಇದರ ವಿಷಯಗಳಲ್ಲಿ, ಸೈತಾನನು **ಕರಕೊಂಡು** ಹೋದನು ಎಂದು ಹೇಳುವಾಗ (ನೋಡಿರಿ 4:8), ಕೇವಲ ಸೈತಾನನು ಆ ಸ್ಥಳಕ್ಕೆ ಹೊಗಲು ಪ್ರೇರಿಪಿಸಿದನು ಮತ್ತು ಯೇಸು ಸ್ವಯಿಚ್ಛೆಯಿಂದಲೇ ಆತನ ನಾಯಕತ್ವಕ್ಕೆ ಅಲ್ಲಿ ಸಮ್ಮತಿಸಿದನು ಎಂದು ಸೂಚಿಸುತ್ತಿದೆ. ಈ ವಾಕ್ಯಭಾಗದಲ್ಲಿ ಪ್ರಯಾಣ ಎನ್ನುವದಕ್ಕಿಂತ ಹೆಚ್ಚಿನ ಬೇರೆ ಅರ್ಥವನ್ನು ಸೂಚಿಸಿಲ್ಲ.

ಯೆರೂಸಲೇಮಿನಲ್ಲಿ ಸೈತಾನನು ಯೇಸುವನ್ನು **ದೇವಾಲಯದ ಶಿಖರದ ಮೇಲೆ ನಿಲ್ಲಿಸಿದನು.** "ಶಿಖರ" ಎನ್ನುವ ಶಬ್ದದ ಅಕ್ಷರಾಂಶವಾಗಿ "ಶಿಖರ ಶ್ರೇಣಿಯ ಒಂದು ಭಾಗ" ಎಂದು ಭಾಷಾಂತರಿಸಬಹುದು; ಇದು ಎತ್ತರದ ಸ್ಥಳವನ್ನು ಸೂಚಿಸುತ್ತದೆ ("ತುದಿ") ಅಥವಾ ಅಂತ್ಯ ("ಕೊನೆ") ಎಂದು ಸೂಚಿಸುತ್ತದೆ. ಗ್ರೀಕ್ ಶಬ್ದ "ದೇವಾಲಯ" ಎಂದು ಅನುವಾದಿಸಲಾಗಿದೆ, ಸಾಮಾನ್ಯವಾಗಿ ದೇವಾಲಯದ ಸಂಕೀರ್ಣ ಎಂದು ಹೇಳಲಾಗುತ್ತದೆ. ಎತ್ತರವಾದ ಆ ದೇವಾಲಯದ ಮೇಲೆ ಯೇಸು ನಿರ್ದಿಷ್ಟವಾಗಿ ಯಾವ ಸ್ಥಳದಲ್ಲಿ ನಿಂತಿದ್ದನು ಎನ್ನುವ ಪ್ರಶ್ನೆ ಹಾಗೆಯೇ ಉಳಿದಿದೆ. Robert H. Gundry ರವರು ಮೂರು ಸಾಧ್ಯತೆಗಳ ಪಟ್ಟಿಯನ್ನು ಮಾಡಿದ್ದಾನೆ: (1) ದೇವಾಲಯದ ಶಿಖರ ಸ್ಥಳ, (2) ದೇವಾಲಯದ ಬಾಗಿಲಿನ ಚೌಕಟ್ಟಿನ ಮೇಲೆ, ಮತ್ತು (3) ಹೊರಗಿನ ಅಂಗಳದ ದಕ್ಷಿಣದ ಪೂರ್ವದ ಮೂಲೆ (ರಾಜನ

ಮೊಗ ಶಾಲೆ).[11] ಮೂರನೆಯ ಆಯ್ಕೆಯ ಆಳವಾದ ಸ್ಥಳ, ಕಿದ್ರೋನ್ ಕಣಿವೆಗಿಂತಲೂ "ಸುಮಾರು ಎರಡನೂರು ಅಡಿಗಳ ಆಳ ಇದೆ."[12] ಈ ಆಳವನ್ನು Josephus ರವರು ಅದರ ವರ್ಣನೆಯನ್ನು ಹೀಗೆ ವಿವರಿಸಿದ್ದಾನೆ:

> [ರಾಜನ ಮೊಗಶಾಲೆ] ಸೂರ್ಯನ ಕೆಳಗಡೆ ಇರುವ ಎಲ್ಲದಕ್ಕಿಂತಲೂ ಉನ್ನತವಾದದ್ದು ಪ್ರಸ್ತಾಪಿಸಲಾಗಿದೆ; ಆ ಕಣಿವೆ ಬಹಳ ಆಳವಾಗಿದೆ, ಮತ್ತು ಅದರ ಮೇಲಿನ ಭಾಗ ನೋಡಲು ಆಗುವುದಿಲ್ಲ ... ಆ ಕೋಟೆಯ ಗೋಡೆಯ ಮೇಲಿನಿಂದ ಕೆಳಗಡೆ ನೋಡಿದರೆ ಅಥವಾ ಅತಿ ಎತ್ತರದಿಂದ ಕೆಳಗೆ ನೋಡಿದರೆ ಎರಡರಲ್ಲಿಯೂ ಅವರಿಗೆ ತಲೆ ಸುತ್ತು [ತಲೆ ತಿರುಗಿದಂತೆ] ಬರಬಹುದು, ಆತನ ದೃಷ್ಠಿ ಅಲ್ಲಿಂದ ಆಳವಾದ ಸ್ಥಳಕ್ಕೆ ದೃಷ್ಠಿಸಲು ಆಗದೆ ಇರಬಹುದು.[13]

ಈ ಘಟನೆಯ ಸಂಬಂಧದಲ್ಲಿ ಯೆಹೂದ್ಯರಿಗೆ ನಿರ್ದಿಷ್ಟವಾದ ಒಂದು ನಂಬಿಕೆ ಇದ್ದುದರಿಂದ ಸೈತಾನನು ಯೇಸುವನ್ನು ದೇವಾಲಯದ ಶಿಖರದ ಮೇಲೆ ನಿಲ್ಲಿಸಿರಬಹುದು. ನಂತರ ಯೆಹೂದ್ಯ ಗುರುಗಳ ಪಂಗಡಕ್ಕೆ ಸಂಬಂಧಿಸಿದ ಸಂಪ್ರದಾಯವು ಹೀಗೆ ಹೇಳಿತು, "ರಾಜ ಮೆಸ್ಸೀಯನು ತನ್ನನ್ನು ಪ್ರಕಟಿಸಿಕೊಂಡಾಗ ಆತನೇ ಬಂದು ದೇವಾಲಯದ ಶಿಖರದ ಮೇಲೆ ನಿಂತನು."[14] ತನ್ನ ಪ್ರಕಾಶಮಾನವಾದ ಪ್ರತ್ಯಕ್ಷತೆಯು ಎಲ್ಲಾ ಇಸ್ರಾಯೇಲರು ಆತನನ್ನು ನಂಬಲು ಅದು ಕಾರಣವಾಗಿತ್ತು. Gundry, ರವರು ಯೆಹೂದ್ಯರ ನಂಬಿಕೆಯನ್ನು ಗುರುತಿಸಿ ಅವರು ಹೀಗೆ ಬರೆದಿದ್ದಾರೆ. "ಒಂದು ಪ್ರಯೋಜನಕರವಾದ ದೈವೀಕ ಅರ್ಥಕೊಡಲು ಅನೂಕೂಲವಾಗುವಂತೆ ಅರಣ್ಯವು ಅನೇಕ ಪ್ರಪಾತಗಳನ್ನು ಹೊಂದಿರುವದರಿಂದ, ದೇವಾಲಯ ಆಯ್ಕೆಮಾಡಿ ಕೊಂಡಿರುವದು ಮೆಸ್ಸೀಯನಿಗೆ ಸಂಬಂಧಿಸಿದ ಸೂಚನೆ ಸಾರ್ವಜನಿಕವಾಗಿ ತೋರಿಸುವಂಥದ್ದಾಗಿದೆ."[15] ಒಂದು ವೇಳೆ ಯೇಸು ದೇವಾಲಯದಿಂದ ಕೆಳಗೆ ದುಮುಕಿದರೆ, "ಶಿಲುಬೆಯು ಬಹುಶಃ ತಪ್ಪಿಹೋಗುತ್ತಿತ್ತು, ಕಿರೀಟವು ಅದು ಯಾವುದೇ ಹೋರಾಟ ಅಥವಾ ನೋವಿಲ್ಲದೆ ಪಡೆಯಬಹುದಾಗಿತ್ತು" ಎಂದು William Hendriksen ಹೇಳಿದ್ದಾರೆ.[16]

**ವಚನ 6.** ಯೇಸುವು ತನ್ನ ಗುರುತನ್ನು ದೃಢಪಡಿಸಲು ಸೈತಾನನು ಒತ್ತಾಯಪಡಿಸುತ್ತಿದ್ದಾನೆ: **ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ದುಮುಕು.** ತನ್ನ ಸವಾಲಿಗೆ ಬೆಂಬಲಕೊಡಲು ಸೈತಾನನು ಕೀರ್ತನೆ 91:11, 12ರ ವಾಕ್ಯವನ್ನು ತೆಗೆದುಕೊಂಡು ದೇವರು ನಂಬಿಗಸ್ತರನ್ನು ಕಾಪಾಡಲು ತನ್ನ ದೂತರನ್ನು ಕಳುಹಿಸುತ್ತೇನೆಂದು ವಾಗ್ದಾನ ಮಾಡಿದ್ದಾನೆ: **ನಿನ್ನ ಕಾಲು ಕಲ್ಲಿಗೆ ತರಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು.** Morris ಈ ವಿಷಯವನ್ನು ಹೀಗೆ ವಿವರಿಸಿದ್ದಾರೆ, "ದೂತನ ಜವಾಬ್ದಾರಿಕೆಯಿರುವದರಿಂದ ಒಂದು ಚಿಕ್ಕ ತಪ್ಪಾಗಲು ಸಹ ಸಾಧ್ಯವಿಲ್ಲ. ಅಲ್ಲಿ ಕಾಲಿನ ಬೆರಳು ಸಹ ಯಾವುದೇ ತಾಗುವುದಿಲ್ಲ!"[17] ಈ ವಚನದಲ್ಲಿ ಮತ್ತು ಲೂಕನ ಸುವಾರ್ತೆಯಲ್ಲಿ (ಲೂಕ 4:10, 11), ಸೈತಾನನು ವಾಕ್ಯವನ್ನು ಉಲ್ಲೇಖಿಸಿ ಹೇಳುವದನ್ನು ಚಿತ್ರಿಸಲಾಗಿದೆ. ಅವನು ಸರಿಯಾಗಿ ಈ ವಾಕ್ಯ ಭಾಗವನ್ನು ಹೇಳಿದನಾದರೂ, ತೆಗೆದುಕೊಂಡಿರುವ ಸಂದರ್ಭ ಸರಿಯಾದದ್ದಲ್ಲವಾಗಿದೆ.

**ವಚನ 7.** ಈ ವಾಕ್ಯ ಭಾಗವು ಜನರಿಗೆ ಪ್ರೋತ್ಸಾಹ ಮಾಡುವದಕ್ಕಾಗಿಯೇ ಹೊರತು ದೇವರನ್ನು ಪರೀಕ್ಷಿಸುವದಕ್ಕೆ ಇರುವುದಿಲ್ಲ ಎಂದು ಹೇಳುವದರಿಂದ ಈ ಭಾಗವನ್ನು ತಪ್ಪಾಗಿ ಉಪಯೋಗಿಸಿರುವದನ್ನು **ಯೇಸು** ಸರಿಪಡಿಸಿದ್ದಾನೆ. ಮತ್ತೊಂದವರ್ತಿ, ಧರ್ಮೋಪದೇಶ ಕಾಂಡದಿಂದ ಉಲ್ಲೇಖಿಸಿ ಹೇಳಿದನು: **ನೀವು ನಿಮ್ಮ ದೇವರನ್ನು ಪರೀಕ್ಷಿಸಬಾರದು** ಎಂದು ಬೇರೆ ರೀತಿಯಲ್ಲಿ ಅಲ್ಲಿ ಬರೆದಿದೆ (ಧರ್ಮೋಪದೇಶಕಾಂಡ 6:16). ಈ ವಾಕ್ಯ ಭಾಗವು ಇಸ್ರಾಯೇಲರು ಮಸ್ಸಾದಲ್ಲಿ ದೇವರಿಗೆ ಪರಿಕ್ಷಿಸಿರುವದನ್ನು ಸೂಚಿಸುತ್ತದೆ, ಇದು ವಿಮೋಚನಕಾಂಡ 17:1-7ರಲ್ಲಿ ದಾಖಲಿಸಲಾಗಿದೆ. ಇಸ್ರಾಯೇಲರು ರೇಫೀದಿಮಿನಲ್ಲಿ

ಅರಣ್ಯದಲ್ಲಿರುವಾಗ ಅಲ್ಲಿ ಅವರಿಗೆ ಕುಡಿಯಲು ನೀರು ಇರಲಿಲ್ಲ. ಅವರು ಮೋಶೆಯ ವಿರುದ್ಧವಾಗಿ ಗೊಣಗಿ ದೇವರನ್ನು ಪರೀಕ್ಷಿಸಿದರು. "ದೇವರು ನಮ್ಮ ಮಧ್ಯದಲ್ಲಿ ಇದ್ದಾನೋ ಅಥವಾ ಇಲ್ಲವೋ?" ಎಂದು ಕೇಳಿದರು ಆ ಸ್ಥಳಕ್ಕೆ "ಮಸ್ಸಾ" ಎಂದು ("ಪರೀಕ್ಷೆ") ಮತ್ತು "ಮೆರೀಬಾ" ("ಜಗಳ") ಎಂದು ಕರೆದರು. ಧರ್ಮೋಪದೇಶಕಾಂಡ 6:16ನ್ನು ಉಲ್ಲೇಖಿಸಿ ಯೇಸು ದೇವರನ್ನು ಪರೀಕ್ಷಿಸಲಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಆತನು ತನ್ನ ತಂದೆಯಲ್ಲಿ ನಂಬಿಕೆಯಿಟ್ಟನು ಮತ್ತು ಆತನು ಇಸ್ರಾಯೇಲರಂತೆ ವಿಫಲನಾಗಲಿಲ್ಲ.[18]

## ತೃತೀಯ ಶೋಧನೆ (4:8-10)

**8ಬಳಿಕ ಸೈತಾನನು ಆತನನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನೂ ಅವುಗಳ ವೈಭವವನ್ನೂ 9ಆತನಿಗೆ ತೋರಿಸಿ - ನೀನು ನನಗೆ ಸಾಷ್ಟಾಂಗನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡುವೆನು ಅಂದನು. 10ಯೇಸು ಅವನಿಗೆ - ಸೈತಾನನೇ, ನೀನು ತೊಲಗಿ ಹೋಗು. ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡ ಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು ಎಂಬುದಾಗಿ ಬರೆದದೆ ಎಂದು ಹೇಳಿದನು.**

**ವಚನ 8.** ದೇವರು ವಾಗ್ದಾನ ಮಾಡಿದ ರಾಜ್ಯದ ಮೇಲೆ ರಾಜನಾಗಲು ಯೇಸು ಈ ಲೋಕಕ್ಕೆ ಬಂದನು ದೇವರು ಅದನ್ನು ಮಾಡುವವನಾಗಿದ್ದರೆ, ಯೇಸು ಶಿಲುಬೆಯ ಮಾರ್ಗವಾಗಿ ಹೋಗಲೇಬೇಕಾಗಿತ್ತು. ಆತನ ಮಹಿಮೆಗೆ ಸೈತಾನನು ಆತನ ಮುಂದೆ ಹತ್ತಿರವಾಗುವ ದಾರಿಯನಿಟ್ಟನು: **ಬಳಿಕ ಸೈತಾನನು ಆತನನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನು ಅವುಗಳ ವೈಭವವನ್ನು ಆತನಿಗೆ ತೋರಿಸಿದನು.** ಈ ದೃಶ್ಯವು ಮೋಶೆ ನೆಬೋ ಬೆಟ್ಟವನ್ನು ಹತ್ತಿ ವಾಗ್ದಾನದ ದೇಶದ ಎಲ್ಲಾ ದಿಕ್ಕುಗಳನ್ನು ನೋಡಿದ ಹಿಂದಿನ ದೃಶ್ಯವನ್ನು ನೆನಪಿಸುತ್ತದೆ (ಧರ್ಮೋಪದೇಶಕಾಂಡ 3:27; 34:1-4). ಈ ಸನ್ನಿವೇಶದಲ್ಲಿ *kosmos* ಎಂಬ ಪದವು "ಪ್ರಪಂಚ" ಎಂದು ವಾಕ್ಯಭಾಗದ ಇನ್ನೊಂದು ಕಡೆ ಸೂಚಿಸುವಂಥದ್ದಾಗಿದೆ, ಒಂದು ಪರಿಮಿತವಾದ ತಿಳುವಳಿಕೆಯಲ್ಲಿ ತೋರಿಸುವಂಥದ್ದಾಗಿದೆ (ರೋಮಾಪುರ 1:8; 4:13; ಕೊಲಸ್ಸೆ 1:6).[19] ಈ ಕಾರಣದಿಂದಲೆ ಪ್ರಪಂಚ ಎನ್ನುವ ಶಬ್ದ ಪಾಲೇಸ್ತೀನವನ್ನು ಮಾತ್ರ ಸೂಚಿಸುತ್ತದೆ. ಕೆಲವೊಬ್ಬರು ಬೇರೆ ರೀತಿಯಲ್ಲಿ ಸೈತಾನನು ಮತ್ತು ಯೇಸು ಅಕ್ಷಾರಾಂಶವಾಗಿ ಭೂಲೋಕದಲ್ಲಿರುವ "ಎಲ್ಲಾ ರಾಜ್ಯಗಳನ್ನು" ನೋಡುತ್ತಿದ್ದರು ಎಂದು ವಾದಿಸಲು ಇಷ್ಟಪಡುವರು. ಯೇಸು ಎಲ್ಲಾ ರಾಜ್ಯಗಳನ್ನು ನೋಡಿದನೋ ಅಥವಾ ಅದರಲ್ಲಿ ಕೆಲವೊಂದನ್ನು ನೋಡಿದನೋ ಎನ್ನುವ ಈ ಶೋಧನೆಯ ಸಂದರ್ಭದಲ್ಲಿ ಪ್ರಾಮುಖ್ಯವಾದ ಅಂಶವಲ್ಲ.

**ವಚನ 9.** ಮೆಸ್ಸೀಯನು ಎಲ್ಲಾ ದೇಶಗಳನ್ನು ಆಳುವನು ಎಂಬುದಾಗಿ ಹಳೆ ಒಡಂಬಡಿಕೆಯಲ್ಲಿ ಸೂಚಿಸಿದೆ (ಕೀರ್ತನೆ 2:6, 8; 72:8-11; ದಾನಿಯೇಲ 7:14). ಹಾಗಿದ್ದರೂ, ಈ ಸಾರ್ವತ್ರಿಕವಾದ ಆಳ್ವಿಕೆಯು ಕ್ರಿಸ್ತನ ಶ್ರಮೆ ಮತ್ತು ಮರಣದ ನಂತರ ನೆರವೇರುವಂಥದ್ದಾಗಿದೆ (28:18; ಫಿಲಿಪ್ಪಿ 2:8-11). ಸಂಕ್ಷಿಪ್ತವಾಗಿ ಹೇಳುವಾಗ, ಸೈತಾನನು ಯೇಸುವಿಗೆ ಕನಿಷ್ಟವಾದ ಪ್ರತಿಭಟನೆ ಮಾಡಲು ಶೋಧಿಸಿದನು. **ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡುವೆನು** ಎಂದು ಆತನಿಗೆ ಸೈತಾನನು ಹೇಳಿದನು.

ಲೋಕದ ರಾಜ್ಯಗಳನ್ನು ಸೈತಾನನು ಯೇಸುವಿಗೆ ಹೇಗೆ ಕೊಡುತ್ತಾನೆ? ಲೂಕನ ಪ್ರಕಾರ, "ಇದೆಲ್ಲಾ ನನಗೆ ಕೊಟ್ಟಿದೆ [ಇವೆಲ್ಲವುಗಳ ಅಧಿಕಾರವನ್ನು], ಇದನ್ನು ನನ್ನ ಮನಸ್ಸು ಬಂದವನಿಗೆ ಕೊಡುತ್ತೇನೆ" (ಲೂಕ 4:6) ಎಂದು ಸೈತಾನನು ಯೇಸುವಿಗೆ ಹೇಳಿದ್ದಾನೆ. ಈ ಸೈತಾನನ ಹೇಳಿಕೆ ನಂಬಲು ಅರ್ಹವಾಗಿದ್ದರೆ, ದೇವರು ಅವನಿಗೆ ಈ ಪ್ರಪಂಚದ

ಮೇಲೆ ಸ್ವಲ್ಪ ಪರಿಮಿತವಾದ ಅಧಿಕಾರವನ್ನು ಅವಕಾಶ ಮಾಡಿದನೆಂದು ಸ್ಪಷ್ಟವಾಗುತ್ತಿತ್ತು. ಸೈತಾನನಿಗೆ "ಇಹಲೋಕಾಧಿಪತಿ" (ಯೋಹಾನ 16:11) ಮತ್ತು ಈ "ಪ್ರಪಂಚದ ದೇವರು" (2 ಕೊರಿಂಥ 4:4) ಎಂಬುದಾಗಿ ಸೈತಾನನಿಗೆ ಕೊಟ್ಟಿರುವ ಮಿತವಾದ ಅಧಿಕಾರ ವರ್ಣಿಸಿರುವ ಇತರೆ ಬೇರೆ ವಾಕ್ಯಭಾಗಗಳೊಂದಿಗೆ ಈ ವಾಕ್ಯವು ಒಪ್ಪುವಂತದ್ದಾಗಿದೆ.

**ವಚನ 10. ಯೇಸು** ಈ ರೀತಿಯಲ್ಲಿ ಹೇಳುತ್ತಾ **ಸೈತಾನನೇ ನೀನು ತೊಲಗಿ ಹೋಗು!** ಎಂದು ಪ್ರತಿಕ್ರಿಯಿಸಿದನು. ಇಂಥಹಾ ವ್ಯಕ್ತಪಡಿಸುವಿಕೆ, ಯೇಸು ಪೇತ್ರನಿಗೆ ಹೇಳುವಾಗ, "ಸೈತಾನನೇ ನನ್ನ ಮುಂದೆ ನಿಲ್ಲಬೇಡ ನಡೆ!" (16:23) ಎಂದು ಮತ್ತಾಯನಲ್ಲಿ ಕಾಣಿಸುತ್ತದೆ. ಆ ಸಮಯದಲ್ಲಿ, ಸೈತಾನನು ಪೇತ್ರನನ್ನು ಉಪಯೋಗಿಸಿ ಯೇಸುವಿಗೆ ಶೋಧಿಸಿತು, ಮತ್ತೊಂದಾವರ್ತಿ ಆ ಶಿಲುಬೆಯನ್ನು ತಪ್ಪಿಸಲು ಕೂಗಾಡಿದನು. ಈ ಸಂದರ್ಭದಲ್ಲಿ ಯೇಸು ಸೈತಾನನಿಗೆ ಆತನ ಸನ್ನಿದಿಯಿಂದ ಹೊರಟು ಹೋಗಲು ಹೇಳುತ್ತಿದ್ದಾನೆ.

ಮತ್ತೊಂದಾವರ್ತಿ ಯೇಸು ಸೈತಾನನಿಗೆ ವಾಕ್ಯದ ಮುಖಾಂತರ ಉತ್ತರವನ್ನು ಕೊಟ್ಟನು. ಆತನು ಸೆಪ್ಟುಜೆಂಟಿನ ಧರ್ಮೋಪದೇಶಕಾಂಡ 6:13ರಿಂದ ಉಲ್ಲೇಖಿಸಿದನು: **ನಿಮ್ಮ ದೇವರಾದ ಯೆಹೋವನನ್ನು ಆರಾಧಿಸಬೇಕು ಮತ್ತು ಆತನನ್ನೇ ಸೇವಿಸಬೇಕು** ಎಂದು ಬರೆದಿದೆ. ಪ್ರತಿಯೊಂದು ಪ್ರತಿಕ್ರಿಯೆಯಲ್ಲಿ ಯೇಸು ಧರ್ಮೋಪದೇಶಕಾಂಡದಿಂದ ವಾಕ್ಯವನ್ನು ತೆಗೆದುಕೊಂಡು ಹೇಳಿದ್ದಾನೆ. ಈ ಮೂಲ ಸಂದರ್ಭದ ವಾಕ್ಯಭಾಗದಲ್ಲಿ ಇಸ್ರಾಯೇಲರಿಗಾಗಿ ಎಚ್ಚರಿಕೆ ಒಳಗೊಂಡಿದೆ. ಜನರು ವಾಗ್ದಾನ ನೆಲವನ್ನು ಪ್ರವೇಶಿಸಿದ ನಂತರ, ಅವರು ತನ್ನ ಒಡಂಬಡಿಕೆಯ ವಾಗ್ದಾನದ ಪ್ರಕಾರ ಆಶೀರ್ವದಿಸಿದ ದೇವರನ್ನು ಅವರು ಮರೆತು ಹೋಗುವಂತೆ ಶೋಧನೆಗೆ ಒಳಗಾಗುತ್ತಾರೆ. ಅದು ಮಾತ್ರವಲ್ಲದೆ, ಅವರು ಕಾನಾನ್ಯ ದೇವತೆಗಳನ್ನು ಪೂಜಿಸುವ ಪ್ರಭಾವಕ್ಕೆ ಒಳಗಾಗಬಹುದು (ಕೆಲವು ಸಾರಿ ರಾಜಕೀಯ ಲಾಭಕ್ಕಾಗಿ) ಧರ್ಮೋಪದೇಶಕಾಂಡ 6:14, 15 ಹೇಳುತ್ತದೆ, "ಸುತ್ತಲಿರುವ ಜನಾಂಗಗಳು ಸೇವಿಸುವ ದೇವರುಗಳನ್ನು ನೀವು ಆರಾಧಿಸಬಾರದು, ನಿಮ್ಮ ಮಧ್ಯದಲ್ಲಿರುವ ನಿಮ್ಮ ದೇವರಾದ ಯೆಹೋವನು ತನಗೆ ಸಲ್ಲಬೇಕಾದ ಗೌರವವನ್ನು ಇನ್ನೊಬ್ಬನಿಗೆ ಸಲ್ಲಗೊಡಿಸದ ದೇವರು; ಆತನು ನಿಮ್ಮ ಮೇಲೆ ಕೋಪಗೊಂಡರೆ ನಿಮ್ಮನ್ನು ಭೂಮಿಯ ಮೇಲೆ ಉಳಿಯದಂತೆ ನಾಶಮಾಡುವನು."

ದೇವ ಜನರಾದ ಇಸ್ರಾಯೇಲರು ಪುನಃ ಪುನಃ ಕಾನನ್ಯರ ದೇವತೆಗಳನ್ನು ಆರಾಧಿಸಿ ಅವರು ಸೋತು ಹೋದರು, ಆದರೆ ದೇವಕುಮಾರನಾದ ಯೇಸು ಸಂಪೂರ್ಣ ನಂಬಿಕೆಯಿಂದ ತನ್ನ ತಂದೆಗೆ ಭಕ್ತಿಯುಳ್ಳವನಾಗಿದ್ದನು. ಸೈತಾನನಿಗೆ ತಲೆಬಾಗಿಸಲು ಆತನು ನಿರಾಕರಿಸಿದನು.[20] **ದೇವರಿಗೆ ಸಂಪೂರ್ಣ ಒಪ್ಪಿಸುವಿಕೆಯು ಸಿಂಹಾಸನಕ್ಕೆ ಮಾರ್ಗವಾಯಿತು.** Morris **ಅವರು "ಕೇವಲ"** "only" **ಎನ್ನುವ ಶಬ್ದಕ್ಕೆ ಲಕ್ಷವಹಿಸಿದ್ದಾರೆ.** ***"ಕೇವಲ only*** **ಎನ್ನುವದು ಪ್ರಾಮುಖ್ಯವಾದ ಶಬ್ದವಾಗಿದೆ ಎಂದು ಬರೆದಿದ್ದಾರೆ. ಇದು ಗೌರವವುಳ್ಳ ಪ್ರತಿಕ್ರಿಯೆ ಆಗಿದೆ, ಸೈತಾನನು ಯೇಸುವಿಗೆ ಭೂಮಿಯ ಮೇಲಿರುವ ಸಕಲ ಅಧಿಕಾರ, ವೈಭವ ಕೊಡುತ್ತೇನೆಂದು ಹೇಳಿದನು ಅವನು ಕೊಡಬಹುದಾಗಿತ್ತು, ಆದರೆ ಯೇಸು ಕೇವಲ ದೇವರನ್ನು ಆರಾಧಿಸಿದನು ಮತ್ತು ಭೂಪರಲೋಕದಲ್ಲಿಯ ಎಲ್ಲಾ ಅಧಿಕಾರವು ಆತನಿಗೆ ಕೊಡಲ್ಪಟ್ಟಿದೆ (28:18)."**[21] ಕ್ರಿಸ್ತನು ಕಿರೀಟ ಹೊಂದುವ ಮೊದಲು ಶಿಲುಬೆಯನ್ನು ಹೊರಬೇಕಾಗಿತ್ತು. ನಾವು "ಜೀವ ಕಿರೀಟ" ಹೊಂದಲು (ಪ್ರಕಟಣೆ 2:10) ಯೇಸುವಿನ ವಿಶ್ವಸನೀಯತೆಯ ಮಾದರಿಯನ್ನು ಅನುಸರಿಸುವದೊಂದೇ ಮಾರ್ಗವಾಗಿದೆ (1 ಪೇತ್ರ 2:21-25).

## ಮುಕ್ತಾಯ (4:11)

**11ಆಗ ಸೈತಾನನು ಆತನನ್ನು ಬಿಟ್ಟುಬಿಟ್ಟನು. ಮತ್ತು ದೇವದೂತರು ಬಂದು ಆತನಿಗೆ ಉಪಚಾರ ಮಾಡಿದರು.**

**ವಚನ 11.** ತೃತೀಯ ಶೋಧನೆಯು ಮುಗಿದ ತರುವಾಯ, ಯೇಸುವಿನ ಆಜ್ಞೆಗೆ ಅನುಗುಣವಾಗಿ (4:10), **ಸೈತಾನನು ಆತನನ್ನು** ಬಿಟ್ಟು ಬಿಟ್ಟನು. ಸೈತಾನನು "ಸ್ವಲ್ಪ ಕಾಲ ಆತನನ್ನು ಬಿಟ್ಟನು" ಎಂದು ಲೂಕ 4:13ರಲ್ಲಿ ದಾಖಲಿಸಿದ್ದಾನೆ. ಯೇಸು ಅನುಭವಿಸಿದ ಶೋಧನೆಯು ಅಡವಿಯಲ್ಲಿ ಇರುವಾಗ ಎದುರಾಗಿರುವದು ಮಾತ್ರವಲ್ಲದೆ, "ಸಕಲ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು ಪಾಪ ಮಾತ್ರ ಮಾಡಲಿಲ್ಲ" (ಇಬ್ರಿಯ 4:15). ಯೇಸು ಶಿಲುಬೆಗೆ ಹೋಗುವವರೆಗೆ ಸೈತಾನನು ಶೋಧಿಸಿದನು. ಯೆಹೂದ್ಯ ಜನರ ಗುಂಪು ಆತನನ್ನು ರಾಜನನ್ನಾಗಿ ಮಾಡಲು ಒತ್ತಾಯ ಮಾಡಿದಾಗ ಆತನಿಗೆ ಶೋಧನೆ ಆಗಿರಬಹುದು (ಯೋಹಾನ 6:15), ಜನರು ಸೂಚಕಕಾರ್ಯಗಳನ್ನು ನೋಡಲು ಪ್ರಯತ್ನಿಸಿದಾಗ (ಲೂಕ 11:29), ಮತ್ತು ತನ್ನ ಸ್ವಂತ ಶಿಷ್ಯನು ಆ ಶಿಲುಬೆಯನ್ನು ಬಿಟ್ಟುಬಿಡಲು ಶೋಧಿಸಿದಾಗ (ಮತ್ತಾಯ 16:21-23). ಆದರೂ ಆತನನ್ನು ಶಿಲುಬೆ ಮೇಲೆ ತೂಗಾಡುತ್ತಿದ್ದರೂ, "ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ ನಿನ್ನನ್ನು ರಕ್ಷಿಸಿಕೋ; ದೇವ ಮಗನು ಆಗಿದ್ದರೆ ಶಿಲುಬೆಯಿಂದ ಇಳಿದು ಬಾ ಎಂದು ಆತನನ್ನು ಹಂಗಿಸುವ ಸೈತಾನನ ಶೋಧನೆಗಳು ಜನರ ಗುಂಪಿನಿಂದ ಕೂಗುವದನ್ನು ಆತನು ಕೇಳಿರಬಹುದು" (27:40). ಅವನು ಆತ್ಮಗಳ ಅನ್ವೇಷಣೆಯಲ್ಲಿ, ಸೈತಾನನು ಕಾಡು ಪ್ರಾಣಿಯಂತೆ ನಿಧಾನವಾಗಿ ಬೇಟೆಗಾಗಿ ಹೊಂಚುಹಾಕುವನು ಆಗಿದ್ದಾನೆ (1 ಪೇತ್ರ 5:8).

ಸೈತಾನನು ಬಿಟ್ಟು ಬಿಟ್ಟ ನಂತರ, **ದೇವದೂತರು ಬಂದು ಆತನಿಗೆ ಉಪಚಾರ ಮಾಡಿದರು.** ದೇವದೂತರನ್ನು "ಸೇವೆ ಮಾಡುವ ಆತ್ಮಗಳು" ಎಂದು ಇಬ್ರಿಯಾ ಬರಹಗಾರನು ಸೂಚಿಸುತ್ತಾನೆ (ಇಬ್ರಿಯ 1:14). ನಿಶ್ಚಯವಾಗಿ ಯೇಸು ಗೆತ್ಸೆಮನೆಯಲ್ಲಿ ನಿರಂತರವಾಗಿ ಪ್ರಾರ್ಥಿಸಿದ ನಂತರ ಒಬ್ಬ ದೇವದೂತನು ಬಂದು ಆತನಿಗೆ ಬಲಪಡಿಸಿದಂತೆಯೇ (ಲೂಕ 22:43), ಸೈತಾನನಿಂದ ಶೋಧಿಸಲ್ಪಟ ನಂತರ ದೇವದೂತರು ಆತನನ್ನು ಬಲಪಡಿಸಿದರು.

## ಪಾಠಗಳು

## ಶೋಧನೆಯ ಸಮಯಗಳಲ್ಲಿ
## (4:1-11)

ಬಹುತೇಕ ಯೇಸುವಿನ ಶೋಧನೆಗಳನ್ನು ಓದುವದರಲ್ಲಿ ನಾವು ಸೈತಾನ, ಉಪವಾಸ, ಮತ್ತು ಶೋಧನೆಯ ಸ್ವರೂಪದ ಕುರಿತು ಪ್ರಶ್ನೆಗಳನ್ನು ಕೇಳಿದ್ದೇವೆ. ನಾವು ಮುಂದೆ ಮತ್ತಾಯ 4:1-11ರವರೆಗೆ ಓದುತ್ತಾ ಈ ಅಂಶಗಳ ಮೇಲೆ ಗಮನಹರಿಸೋಣ.

*ನಮಗೆ ನಿಜವಾದ ವೈರಿಯಾರು?* ನಮಗೆ ನಿಜವಾದ ವೈರಿಯಾರು ಎನ್ನುವದರ ಪ್ರಶ್ನೆ ನಮಗಿರುವದು ಮುಖ್ಯವಾಗಿದೆ. ಸೈತಾನನು ಮೋಸಗೊಳಿಸುವವನು. ಅವನು "ಆದಿಯಿಂದಲೂ ಕೊಲೆಗಾರನಾಗಿದ್ದು" ಮತ್ತು "ಸುಳ್ಳುಗಾರ" ಮತ್ತು ಸುಳ್ಳಿಗೆ "ಮೂಲ ಪುರುಷನು" ಎಂದು ಯೇಸು ಹೇಳಿದ್ದಾನೆ (ಯೋಹಾನ 8:44). ಅವನು ಪೈಶಾಚಿಕ ಕಾರ್ಯಗಳನ್ನು ಮಾಡುತ್ತಿರುವಾಗ, ಒಬ್ಬ ಕೆಂಪು ವಸ್ತ್ರವುಳ್ಳವನು, ಹಾಗೂ ಕೊಂಬುಗಳು ಮತ್ತು ಬಾಲವಿದ್ದ ತಮಾಷೆಗಾರನಂತೆ ಜನರು ಆತನನ್ನು ನೋಡಿ ನಗುವಂತೆ ಬಹುತೇಕ ಸುಳ್ಳಿನ ಮಹಾಕಾರ್ಯಗಳನ್ನು ಮಾಡುತ್ತಿರುವವನಂತಿದ್ದನು. ಕೆಟ್ಟದ್ದು ಒಳ್ಳೆದಂತೆ ಕಾಣಿಸುವಂತೆ ಸೈತಾನನು ನಮ್ಮನ್ನು ಮೋಸ ಮಾಡುವನು (ಯೆಶಾಯ 5:20). ಅಶ್ಲೀಲ ಪಾಪದ ಸಾಹಿತ್ಯ "ರಚನೆ"ಗಾರ, "ಕೆಟ್ಟ ವ್ಯವಸ್ತೆಗಾರ," "ವ್ಯಭಿಚಾರಿ," ಅರ್ಥವುಳ್ಳ ಸಂಬಂಧ, ಸಲಿಂಗ "ಕಾಮುಕ," "ಒಂದರ ನಂತರ ಇನ್ನೊಂದು ಜೀವನ ಶೈಲಿಯಲ್ಲಿ ಬದುಕುವವ" ಮತ್ತು "ಮಧ್ಯಪಾನವನ್ನು ಪ್ರೀತಿಸುವವನು." ಅವನು ಅಡ್ಡದಾರಿಯ

ಕೆಲಸಗಳನ್ನು ಮಾಡಲು ತನ್ನ ಜನರನ್ನು ನೇಮಿಸುವನು ಎಂದು ಕರೆಯಲಾಗುತ್ತದೆ. ಆತನ ಸೇವಕರು "ಕ್ರಿಸ್ತನ ಅಪೊಸ್ತಲರಂತೆ" ಕಾಣಿಸುವದಕ್ಕೆ ಅವರು ಬದಲಾಗುವರು ಮತ್ತು ಸೈತಾನನು ತಾನೇ "ಪ್ರಕಾಶರೂಪವುಳ್ಳ ದೇವದೂತನು" ವೇಷವನ್ನು ಹಾಕಿಕೊಳ್ಳುವನು ಎಂದು ಪೌಲನು ಎಚ್ಚರಿಸಿದ್ದಾನೆ (2 ಕೊರಿಂಥ 11:13, 14). ಒಳ್ಳೆಯ ಬೋಧಕನು "ದೆವ್ವಗಳ ಬೋಧನೆಗಳ" ಮುಖಾಂತರ ಜನರ ದೊಡ್ಡ ಗುಂಪು ಮಾಡಬಹುದು (1 ತಿಮೋಥೆ 4:1, 2). ಅವರು "ವಂಚನೆಯ ಮಾತುಗಳನ್ನಾಡುತ್ತಿರುವರು" ಮತ್ತು ಅರ್ಧಸತ್ಯ ಹೇಳುವರು. ಅವರು ಪ್ರೀತಿ ಮತ್ತು ಸತ್ಯದ ಕುರಿತು ಮಾತಾಡುವಾಗಲೇ ದ್ವೇಷಿಸುವನ್ನು ಮತ್ತು ವಿಭಜನೆಯನ್ನು ಉಂಟುಮಾಡುವರು.

*ಉಪವಾಸದ ಕುರಿತು ಏನು?* ಉಪವಾಸವು ಅನೇಕ ಕ್ರೈಸ್ತರಿಂದ ಅಲಕ್ಷ್ಯ ಮಾಡಿರುವ ವಿಷಯ ಮತ್ತು ಅದನ್ನು ರೂಢಿಯಾಗಿ ಮಾಡುವವರಾಗಿದ್ದಾರೆ, ಹಾಗಿದ್ದರೂ, ಸಹ ಹಳೆ ಮತ್ತು ಹೊಸ ಒಡಂಬಡಿಕೆ ಎರಡರಲ್ಲಿಯೂ ಸೇರಿಸಿ ಅಭ್ಯಾಸಮಾಡಿರುವ ಮತ್ತು ಬೋಧಿಸಿರುವ ಸತ್ಯವೇದದ ವಿಷಯವಾಗಿದೆ. ಈ ವಾಕ್ಯಭಾಗದಲ್ಲಿ ಗಮನಿಸಿ ನೋಡಿದಂತೆ ಯೇಸು ಉಪವಾಸ ಮಾಡಿದನು. ತನ್ನ ಶಿಷ್ಯರು ಉಪವಾಸ ಮಾಡಲು ಆತನು ಪ್ರೋತ್ಸಾಹಿಸಿದನು (6:16-18; 17:21). ತಾರ್ಷಿಸಿನ ಸೌಲ (ಪೌಲ)ನು ಉಪವಾಸ ಮಾಡಿದನು (ಅಪೊಸ್ತಲರ ಕೃತ್ಯಗಳು) ಮತ್ತು ಕೆಲವು ಸಾರಿ ಸುವಾರ್ತೆ ನಿಮಿತ್ತ ಹಸಿವಿನಿಂದ ಇದ್ದನು (2 ಕೊರಿಂಥ 6:5; 11:27). ಉಪವಾಸವಿರುವದು (ಬಹುಶಃ ಆತ್ಮಿಯತೆಗಾಗಿ ಆಹಾರವನ್ನು ಬಿಟ್ಟು ಬಿಡುವದಕ್ಕಿಂತಲೂ ಒಬ್ಬರಿಗೊಬ್ಬರು ಅತ್ಯಂತ ಸಮೀಪಕ್ಕೆ ಬರುವದಕ್ಕಾಗಿ) ಗಂಡ ಮತ್ತು ಹೆಂಡತಿ ಇದನ್ನು ಮಾಡುವದು ಒಳ್ಳೆಯದೆಂದು ಪೌಲನು ಸೂಚಿತವಾಗಿ ಹೇಳಿದನು (1 ಕೊರಿಂಥ 7:5). ಮುಖ್ಯವಾದ ನಿರ್ಧಾರ ತೆಗೆದುಕೊಳ್ಳುವದಕ್ಕಿಂತ ಮುಂಚೆ ಆದಿ ಸಭೆಯು ಉಪವಾಸ ಮಾಡುತ್ತಿತ್ತು (ಅಪೊಸ್ತಲರ ಕೃತ್ಯಗಳು 13:2; 14:23).

ಯೇಸು ತನ್ನ ಹಿಂಬಾಲಕರಿಗೆ ಉಪವಾಸವನ್ನು ಸಾರ್ವಜನಿಕ ಕಾರ್ಯದಂತೆ ಮಾಡಲು ಆಜ್ಞಾಪಿಸಿರುವದಿಲ್ಲ, ಆದರೆ ಇದು ಯೆಹೂದ್ಯರಲ್ಲಿ ವ್ಯವಸ್ಥಿತವಾಗಿ ಮಾಡುವದು ಕ್ರಮಕ್ಕನುಸಾರವಾಗಿ ಮಾಡಿದನು (6:16-18). ಆತನು ತಪ್ಪಾಗಿ ಆಚರಿಸುವ ಉಪವಾಸವನ್ನು ಖಂಡಿಸಿದ್ದಾನೆ, ಆದರೆ ಆತನು ನಿರ್ದಿಷ್ಟವಾದ ಉಪವಾಸವನ್ನು ಖಂಡಿಸಲಿಲ್ಲ. "ನೀನು ಉಪವಾಸ ಮಾಡಿದ್ದಿಯಾದರೆ …" ಎಂದು ಹೇಳಲಿಲ್ಲ, ಆದರೆ ಅದರ ಬದಲಾಗಿ, "ನೀನು *ಯಾವಾಗಲಾದರು* ಉಪವಾಸ ಮಾಡುವಾಗ …" ಎಂದು ಹೇಳಿದ್ದಾನೆ (6:16; ಒತ್ತಿ ಹೇಳಿದ್ದು ನನ್ನದು). ಆತನು ಪರಲೋಕಕ್ಕೆ ಹಿಂತಿರುಗಿದ ನಂತರ ತನ್ನ ಶಿಷ್ಯರು ಉಪವಾಸಮಾಡುವರೆಂದು ಆತನು ಅಂತರ್ಗತವಾಗಿ ಹೇಳಿದನು (9:14, 15; ಮಾರ್ಕ 2:18-20; ಲೂಕ 5:33-35).

ಉಪವಾಸವು ಕೇವಲ ಉಪವಾಸದ ಉದ್ದೇಶಕ್ಕಾಗಿ ಮಾಡಬಾರದು; ಇದು ಗುಣನಡತೆ ಮತ್ತು ಹೃದಯದ ಮನೋಧರ್ಮಕ್ಕೆ ಪುಷ್ಟಿಕರಿಸುವಂಥದ್ದಾಗಿದೆ. ಉಪವಾಸ ಮಾಡದೇ ಇರುವಾಗ ಅನೇಕ ಆತ್ಮೀಕ ಲಾಭಗಳನ್ನು ಕಳೆದು ಕೊಳ್ಳಬಹುದು. Guy N. Woods ಹೀಗೆ ಬರೆದಿದ್ದಾರೆ,

> ಉಪವಾಸ, ಸರಿಯಾಗಿ ಕಾರ್ಯನಿರತವಾದಲ್ಲಿ, ಅದು ಆತ್ಮೀಕ ಆಶೀರ್ವಾದಗಳ ಮೂಲ, ಚಿತ್ತವನ್ನು ಶಿಸ್ತುಗೊಳಿಸುತ್ತದೆ ಮತ್ತು ಅಂತರಾಳದಲ್ಲಿ ಬಲ ಶಕ್ತಿ ಉತ್ಪಾದಿಸುತ್ತದೆ. ನಾವೆಲ್ಲರು, ಯಾವುದೇ ಸಂದರ್ಭದಲ್ಲಿ, ದೃಢನಿಶ್ಚಯದಿಂದ ಪ್ರಪಂಚದ ತೋರಿಕೆಯ ಆಸೆಯನ್ನು ಮತ್ತು ದೈಹೀಕ ಆಕಾಂಕ್ಷೆಯನ್ನು ನಮ್ಮ ಹೃದಯದಿಂದ ಹೊರಕ್ಕೆ ಹಾಕಬೇಕು ಮತ್ತು ಪ್ರಾರ್ಥನೆಯೊಂದಿಗೆ ಮತ್ತು ಉಪವಾಸದೊಂದಿಗೆ ಇರುವಾಗ ದೇವರಿಗೆ ತುಂಬಾ ಹತ್ತಿರ ತೆಗೆದುಕೊಂಡು ಬರುತ್ತದೆ ಮತ್ತು ಜೀವನದಲ್ಲಿ ಆತನ ಉತ್ತೇಜನ ಮತ್ತು ಮಾರ್ಗದರ್ಶನ ಹೊಂದಬಹುದು. ಇಂಥಹ ಅನುಭವವು ನಮಗೆ

ಅಪಾರವಾದ ಬಲವನ್ನು, ಹೇರಳವಾದ ನಂಬಿಕೆಕೊಡುತ್ತದೆ, ಉತ್ತಮ ಕ್ರೈಸ್ತ ಜೀವಿತ ಜೀವಿಸಲು ಅದರಲ್ಲಿ ತೊಡಗಿಸಿಕೊಳ್ಳಲು ಇದು ನಮಗೆ ಸಿದ್ಧಮಾಡುತ್ತದೆ.[22]

ವಾಗ್ದಾನ ಮಾಡಲ್ಪಟ್ಟಿರುವ ಒಳ್ಳೆಯ ಅಂಶಗಳಿಗಾಗಿ ನಾವು ಉಪವಾಸವನ್ನು ಮಾನ್ಯಮಾಡಬಹುದು. ಉಪವಾಸವು ಜಾಣತನವಾಗಿರಬಹುದು ಮತ್ತು ಅನೇಕ ಸಂದರ್ಭಗಳಲ್ಲಿ ಅದರ ಲಾಭಗಳನ್ನು ಹೊಂದಬಹುದು:

1. ಒಬ್ಬನು ಶೋಧನೆಗೆ ಒಳಗಾಗುವಾಗ ಮತ್ತು ಪರಿಕ್ಷೆಗೆ ಗುರಿಯಾಗುವಾಗ ಅಥವಾ ದುಃಖದಿಂದ ತೊಂದರೆಯಾಗುವಾಗ;
2. ಒಬ್ಬ ಕ್ರೈಸ್ತನು ನಿಜವಾದ ಕ್ರೈಸ್ತ ಜೀವಿತದಲ್ಲಿ ಅಲಕ್ಷತನದಿಂದ ಬೆಳೆಯುತ್ತಿರುವಾಗ;
3. ಸಭೆಯ ಮೇಲೆ ಕಷ್ಟಗಳು ಬರುವಾಗ;
4. ಸಭೆಯಲ್ಲಿ ಪ್ರಮುಖ ನಿರ್ಧಾರಗಳನ್ನು ಮಾಡುವ ಸಮಯದಲ್ಲಿ, ಹಿರಿಯರನ್ನು ಅಥವಾ ಸ್ತ್ರೀ ಸೇವಕರನ್ನು ಅಥವಾ ಉಪದೇಶಕರನ್ನು ಆಯ್ಕೆಮಾಡುವಾಗ;
5. ಒಬ್ಬನು ಅಥವಾ ಒಬ್ಬಳು ತನ್ನ ವೈಯಕ್ತಿಕ ಜೀವನದಲ್ಲಿ ಪ್ರಾಮುಖ್ಯವಾದ ನಿರ್ಧಾರ ಮಾಡುವಾಗ.

*ಸೈತಾನನು ನಮಗೆ ಹೇಗೆ ಶೋಧಿಸುತ್ತಾನೆ?* ನಾವು ಶೋಧನೆಗೆ ಒಳಗಾಗುವಂತೆಯೇ ಯೇಸು ಶೋಧನೆಗೆ ಒಳಗಾದನು ಎಂದು ಆಗಾಗ ಹೇಳಲಾಗಿದೆ. ಅಂದರೆ ಸೈತಾನನು ನಮ್ಮ ಮೇಲೆ ಪ್ರಯೋಗಿಸಿದ ಮಾರ್ಗಗಳಲ್ಲಿಯೇ ಶೋಧಿಸುತ್ತಾನೆ: ಶರೀರ ಆಸೆ, ಕಣ್ಣಿನ ಆಸೆ, ಮತ್ತು ಗರ್ವದ ಜೀವತ (1 ಯೋಹಾನ 2:16), ಸೈತಾನನು ಹವ್ವಳನ್ನು ಇದೆ ರೀತಿಯಲ್ಲಿ ಶೋಧಿ ಸಿದನು. ಆಕೆಯು ಮೊದಲು ಶಾರೀರಿಕ ಶೋಧನೆಗೆ ಒಳಗಾದಳು, ಯಾವಾಗ ಆಕೆ ಹಣ್ಣನ್ನು ನೋಡಿದಳೋ "ತಿನ್ನುವದಕ್ಕೆ ಉತ್ತಮ"ವಾಗಿತ್ತು. ಎರಡನೆಯದಾಗಿ, ಅದು "ನೋಡುವದಕ್ಕೆ ರಮ್ಯವಾಗಿರುವದನ್ನು" ಅವಳು ನೋಡಿದಳು. ಕೊನೆಯದಾಗಿ, ಅದು "ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿರುವದನ್ನು" ಆಕೆ ನೋಡಿದಳು (ಆದಿಕಾಂಡ 3:6). ಕಲ್ಲುಗಳನ್ನು ರೊಟ್ಟಿ ಮಾಡು ಎಂದು ಶರೀರದಾಸೆಯಿಂದ ಯೇಸುವಿಗೆ ಸೈತಾನನು ಶೋಧಿಸಿದನು (ಮತ್ತಾಯ 4:3). ಆತನನ್ನು ಶಿಖರದ ಮೇಲೆ ನಿಲ್ಲಿಸಿ ಅಲ್ಲಿಂದ ಕೆಳಗೆ ದುಮುಕು ಎಂದು ಗರ್ವದ ಜೀವಿತದಿಂದ ಶೋಧಿಸಿದನು (4:6). ಲೋಕದ ಎಲ್ಲಾ ರಾಜ್ಯಗಳನ್ನು ಅದರ ವೈಭವವನ್ನು ತೋರಿಸಿ ಇದೆಲ್ಲಾ ನಿನಗೆ ಕೊಡುತ್ತಿನೆಂದು ಕಣ್ಣಿನ ಆಸೆಯಿಂದಲೂ ಶೋಧಿಸಿದನು (4:8). "ಆದರೆ ಪ್ರತಿಯೊಬ್ಬನು ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆ ಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ; ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ" ಎಂದು ಯಾಕೋಬನು ಹೇಳುತ್ತಿದ್ದಾನೆ (ಯಾಕೋಬ 1:14, 15).

ಶೋಧನೆಯು ಸಾಮಾನ್ಯವಾದ ಅನುಭವವಾಗಿದೆ (1 ಕೊರಿಂಥ 10:13). ನಾವು ಶೋಧನೆಯನ್ನು ಎದುರಿಸುವಾಗ ನಾವು ಅದಕ್ಕೆ ಶರಣಾಗಾಬಾರದು. ಅದನ್ನು ಆತ್ಮವೆಂಬ ಕತ್ತಿಯೊಂದನ್ನು ಆಯುಧವನ್ನಾಗಿ ಧರಿಸಿಕೊಂಡು ಯೇಸು ವಿರೋಧಿಸಿದಂತೆ ನಾವು ಎದುರಿಸಬಹುದು (ಎಫೆಸ 6:17).

*ಸಾರಾಂಶ.* 4:1-11 ವಚನಗಳ ಅಧ್ಯಯನ ಈ ಪಾಠಗಳನ್ನು ಕೊಡುತ್ತದೆ:

1. ನಮ್ಮ ದೊಡ್ಡ ವೈರಿ, ಸೈತಾನ, ಅವನು ವಾಸ್ತವವಾಗಿ ಇದ್ದಾನೆ ಮತ್ತು ಕ್ರೂರವಾಗಿದ್ದಾನೆ.
2. ಯೇಸು ಉಪವಾಸ ಮಾಡಿದನು ಆದರೆ ಮನುಷ್ಯರ ಮೆಚ್ಚಿಕೆಯ ಉಪವಾಸ ಖಂಡಿಸಿದನು.

3. ಶೋಧನೆಯು ಪಾಪವಲ್ಲ.
4. ಸೈತಾನನು ಶರೀರ ದಾಸೆಯಿಂದ, ಕಣ್ಣಿನ ಆಸೆಯಿಂದ, ಗರ್ವದ ಜೀವಿತದಿಂದ ನಮ್ಮನ್ನು ಶೋಧಿಸುತ್ತಾನೆ.
5. ನಾವು ದೇವರ ಚಿತ್ತವನ್ನು ತಿಳಿದುಕೊಂಡು ಅದನ್ನು ಮಾಡುವದರಿಂದ ಶೋಧನೆಯನ್ನು ಜಯಿಸಬಹುದು (4:4, 7, 10).
6. ಶೋಧನೆಯ ಮೇಲೆ ಜಯವು ಆನಂದವಾದ ಆಶೀರ್ವಾದಗಳನ್ನು ತರುತ್ತದೆ (4:11).[23]

## ಶೋಧನೆಯನ್ನು ಎದರಿಸುವದು (4:1-11)

ಯೇಸುವಿನ ಶೋಧನೆಯ ಕಥೆಯನ್ನು ಮೂರು ಸುವಾರ್ತಿಕರು ಬರೆದಿದ್ದಾರೆ (ಮತ್ತಾಯ, ಮಾರ್ಕ, ಲೂಕ).[24] ಸ್ಪಷ್ಟವಾಗಿ, ಯೇಸು ಹೇಗೆ ಶೋಧನೆಯನ್ನು ಎದುರಿಸಿದನೋ ಮತ್ತು ಜಯಿಸಿದನೋ ಎಂಬುದನ್ನು ನಾವು ಅರಿತುಕೊಂಡು ಸೈತಾನನ್ನು ಜಯಿಸಬೇಕೆಂದು ಬಯಸಿದನು. ಈ ಕಥೆಯಲ್ಲಿ ಶೋಧನೆಯ ಕುರಿತಾಗಿ ಈ ಕೆಳಗಿನ ಅಂಶಗಳನ್ನು ನಾವು ಕಲಿಯತ್ತೇವೆ:

*ಒಬ್ಬನ ಜೀವನದ ಒಂದು ಶ್ರೇಷ್ಠವಾದ ಕ್ಷಣ ಎದುರಾದ ಸಮಯದಲ್ಲಿ ಶೋಧನೆ ಬರಬಹುದು.* ಯೇಸುವಿನ ದೀಕ್ಷಾಸ್ನಾನದ ನಂತರ ತಕ್ಷಣವೇ, ಆತನು "ಆತ್ಮನಿಂದ ಅಡವಿಗೆ ನಡಿಸಲ್ಪಟ್ಟು ಸೈತಾನನಿಂದ ಶೋಧಿಸಲ್ಪಟ್ಟನು" (4:1). ಅದೇ ರೀತಿಯಲ್ಲಿ, ನಮ್ಮ ಆತ್ಮೀಕ ಜೀವಿತದಲ್ಲಿ ಅತ್ಯುತ್ತಮವಾದ ಘಟನೆ ಹಾದು ಹೋದ ನಂತರ ಅನೇಕ ಕಾರ್ಗತ್ತಲೆಯ ಕಷ್ಟಗಳು ಮತ್ತು ಶೋಧನೆಗಳು ಹಿಂಬಾಲಿಸುತ್ತವೆ.

*ಶೋಧನೆ ಕೆಲವು ಸಾರಿ ತರ್ಕಬದ್ಧವಾದದ್ದೆಂದು ವೇಷ ಧರಿಸಿಕೊಳ್ಳುತ್ತದೆ* (4:3-10). ಯೇಸು ಆ ಸಂದರ್ಭದಲ್ಲಿ ಎದುರಿಸುವ ಪರಿಸ್ಥಿತಿಗೆ ಆತನು ಕನಿಷ್ಟವಾದ ಅಡೆತಡೆಗಳನ್ನು ಮಾಡುವಂತೆ ಸೈತಾನನು ಯೇಸುವಿಗೆ ತರ್ಕದ ವಿವೇಚನದಲ್ಲಿ ಎಳೆಯಲು ಎಲ್ಲಾ ರೀತಿಯಲ್ಲಿ ಪ್ರಯತ್ನಿಸಿದನು. ನಾವು ಯಾವಾಗ ತರ್ಕಬದ್ಧರಾಗುತ್ತೇವೋ ಆಗ ನಾವು ಮಾಡುವ ಕೆಲಸ ಮಾಡದೆ ನಾವು ನೆಪಗಳನ್ನು ಹೇಳಲು ಪ್ರಯತ್ನಿಸುತ್ತೇವೆ.

*ಶೋಧನೆಯು ಅತಿಘೋರವಾದ ಸ್ವರೂಪ ಹೊಂದಿರುತ್ತದೆ.* ನಮ್ಮ ಬಲಕ್ಕೋಸ್ಕರ ಅಥವಾ ಸಂತೋಷಕ್ಕೋಸ್ಕರ ಸೈತಾನನು ನಮ್ಮ ಆಸೆಯ ಮುಖಾಂತರವೇ ಅಲ್ಲಿ ಮರಳು ಮಾಡುತ್ತಾನೆ.

*ಅದನ್ನು ನಾವು ಸೋಲಿಸುವುದಾದರೆ ಅದನ್ನು ಮುಖಾಮುಖಿಯಾಗಿ ಅದನು ಎದುರಿಸಲೇಬೇಕು.* ಯೇಸು ದೇವರ ವಾಕ್ಯದೊಂದಿಗೆ ಧೈರ್ಯವಾಗಿ ಸೈತಾನನ ಶೋಧನೆಗಳನ್ನು ಎದುರಿಸಿದನು. ಕಟ್ಟಕಡೆಯಲ್ಲಿ, ಸೈತಾನನು "ಸ್ವಲ್ಪ ಕಾಲ ಆತನನ್ನು ಬಿಟ್ಟು ಹೊರಟು ಹೋದನು" (ಲೂಕ 4:13). "ಹೀಗಿರಲಾಗಿ ದೇವರಿಗೆ ಒಳಗಾಗಿರಿ ಸೈತಾನನ್ನು ಎದುರಿಸಿರಿ ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು" ಎಂದು ಯಾಕೋಬನು ಬರೆದಿದ್ದಾನೆ (ಯಾಕೋಬ 4:7).

## ಯೇಸು ಶೋಧನೆ ಒಳಗಾಗಬಹುದಾ? (4:1-11)

ಯೇಸು ಪಾಪದ ಶೋಧನೆಗೆ ಒಳಗಾದನೋ ಅಥವಾ ಇಲ್ಲವೋ ಎನ್ನುವುದು ಸರಳವಾದ ವಿಷಯವಲ್ಲ. ಸರಿಸಮವಾದ ಮನೋಭಿಲಾಷೆ ನಿಲುವು ಹೊಂದಿದಾಗ ಅದು ಇನ್ನೊಬ್ಬರು ಬೇರೆ ವಿಷಯದೊಂದಿಗೆ ವ್ಯತಿರಿಕ್ತ ನಿಲವು ಹೊಂದಿರುತ್ತಾರೆ. ಯೇಸು ಪಾಪದ ಶೋಧನೆಯನ್ನು ಎದುರಿಸಿದನು ಎನ್ನುವ ಅಂಶಕ್ಕೆ ಉತ್ತರವಾಗಿ "ಶೋಧಿಸಲ್ಪಟ್ಟನು" ಎಂಬುದನ್ನು "ಪ್ರಯತ್ನಕ್ಕೆ ಒಳಗಾದನು" ಅಥವಾ "ಪರಿಕ್ಷಿಸಲ್ಪಟ್ಟನು" ಎಂದು ಅನುವಾದಿಸ ಬಹುದಾಗಿದೆಂದು ಹೇಳುತ್ತಾರೆ.

ಪಾಪ ರಹಿತನಾಗಿದ್ದರೂ, ಯೇಸು "ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು" ಎಂದು ಇಬ್ರಿಯ ಬರಹಗಾರನು ಬರೆಯುತ್ತಿದ್ದಾನೆ (ಇಬ್ರಿಯ 4:15). ಆತನು ಪಾಪ ಮಾಡಬಹುದಾಗಿತ್ತು ಆದರೆ ಮಾಡಲಿಲ್ಲ ಎಂದು ಈ ಹೇಳಿಕೆ ಸೂಚಿಸುತ್ತದೆ. ಆತನು ಪಾಪ ರಹಿತನಾಗಿದ್ದರೆ, ಆತನು ಯಾವುದೇ ಪಾಪವು ಮಾಡಲಿಲ್ಲ ಎನ್ನುವ ವಾಸ್ತವಕ್ಕೆ ಯಾಕೆ ಯಾವುದಾದರೂ ಇನ್ನೊಂದು ಅರ್ಥ ಇರುತ್ತದೆ? ಪಾಪಕ್ಕೆ ಶರಣಾಗುವದಕ್ಕೆ ಅವಕಾಶವೇ ಇಲ್ಲದಿರುವಾಗ ಪಾಪಮಾಡಲು ಶೋಧಿಸಲ್ಪಡುವದಿಲ್ಲ. H. Leo Boles ಹೀಗೆ ಬರೆದಿದ್ದಾರೆ, ಯೇಸುವಿನ "ದೀಕ್ಷಾಸ್ನಾನ ಎಷ್ಟು ವಾಸ್ತವವಾಗಿದೆಯೋ ಆತನ ಶೋಧನೆಯು ಅಷ್ಟೆ ವಾಸ್ತವವಾಗಿದೆ."[25]

ನಾವು ಕ್ರಿಸ್ತನ ಸ್ವಾಭಾವ ತಿಳಿದುಕೊಂಡಾಗ ಈ ಸಮಸ್ಯೆ ಪರಿಹಾರ ಮಾಡಿಕೊಳ್ಳಬಹುದು. ಇಲ್ಲಿಯವರೆಗೂ ಯಾರು ಇರದ ಅಸಾಮಾನ್ಯವಾದ ರೀತಿಯಲ್ಲಿ ಆತನು ಇದ್ದನು. ಆತನು ದೈವಿಕತ್ವ ಮತ್ತು ಮಾನವ ಸ್ವರೂಪ ಎರಡನ್ನು ಹೊಂದಿದವನಾಗಿದ್ದನು: ದೇವಕುಮಾರ ಮತ್ತು ಮನುಷ್ಯ ಕುಮಾರನಾಗಿದ್ದನು. ನಮ್ಮ ರೀತಿಯಲ್ಲಿ ಅಲ್ಲ, ಆತನು ದೈವೀಕತ್ವ ಮತ್ತು ಮಾನವತ್ವ ಎರಡು ಸ್ವಾಭಾವಗಳನ್ನು ಹೊಂದಿದ್ದನು. ಇದು ಒಂದು ವೇಳೆ ಇರದೆ ಇದ್ದಿದ್ದರೆ, ಆತನು ಶಿಲುಬೆ ಮೇಲೆ ಮರಣ ಹೊಂದುತ್ತಿರಲಿಲ್ಲ. ದೈವತ್ವ ಮರಣ ಹೊಂದುತ್ತದೆಯೋ? ಯೇಸು ಮರಣ ಹೊಂದಿದನು; ಆತನು ತನ್ನ ಮಾನವ ಸ್ವರೂಪವನ್ನು ಒಪ್ಪಿಸಿ ಕೊಟ್ಟನು (ನೋಡಿರಿ ಯೋಹಾನ 10:17, 18; ಲೂಕ 23:46). ನಾವು ಎದುರಿಸಿದಂತೆಯೇ ಯೇಸು ಶೋಧನೆ ಎದುರಿಸಿದನು, ಆತನು ತನ್ನ ಮಾನವ ಸ್ವರೂಪ ಮತ್ತು ಸ್ವಭಾವದಿಂದ ಅದನ್ನು ಎದುರಿಸಿದನು.

## ಕ್ರಿಸ್ತನ ಶೋಧನೆಗಳು (4:1-11)

ಯೇಸುವಿನ ದೀಕ್ಷಾಸ್ನಾನದ ಸಮಯದಲ್ಲಿ ಕ್ರಿಸ್ತನ ದೈವತ್ವವನ್ನು ಆಕಾಶದ ಸ್ವರದಿಂದ ಪ್ರಕಟಿಸಲಾಯಿತು. "ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆಂದು" ತಂದೆಯು ಹೇಳಿದನು (3:17). ಈ ಸಮಯದ ತಕ್ಷಣವೇ ಯೇಸು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಆತ್ಮನು ಅಡವಿಗೆ ನಡೆಸಲ್ಪಟ್ಟನು. ಪ್ರತಿಯೊಂದು ಶೋಧನೆಯಲ್ಲಿ ಆತನು ನಂಬಿಗಸ್ತ ಕುಮಾರನಂತೆ ಯೇಸು ಸಾಬೀತುಪಡಿಸಿದ್ದಾನೆ. ಅದರ ಫಲವಾಗಿ, ಶಿಲುಬೆ ಮಾರ್ಗದಲ್ಲಿ ಅಂದರೆ, ತನ್ನ ತಂದೆಯ ಚಿತ್ತ ನೆರವೇರಿಸುವ ಮುಖಾಂತರ ಲೋಕರಕ್ಷಕನಾಗುವ ತನಕ, ಆ ಕಾರ್ಯಕ್ಕೆ ಹಿಂಜರಿಯುವಂತೆ ಮಾಡಲು ಸೈತಾನನಿಗೆ ಅವಕಾಶಕೊಡಲಿಲ್ಲ.

ಮೊದಲಿನ ನೋಟದಲ್ಲಿ, ಯೇಸುವಿನ ಶೋಧನೆಗಳು ನಮ್ಮ ಸ್ವಂತ ಅನುಭವಕ್ಕೆ ದೂರವಾಗಿರಬಹುದು. ನಮಗೆ ಕಲ್ಲುಗಳನ್ನು ರೊಟ್ಟಿಯನ್ನಾಗಿ ಮಾಡುವ ಬಲ ನಮಗಿಲ್ಲ, ಮತ್ತು ಎತ್ತರವಾದ ಕಟ್ಟಡದಿಂದ ಹಾರಲು ಅಥವಾ ಸೈತಾನನ್ನು ಆರಾಧಿಸಿಲು ನಮಗೆ ಮನಸ್ಸಿಲ್ಲ. ಆದರೂ, Hare ರವರು ಗಮನಿಸಿದಂತೆ, "ಯೇಸು ನಮ್ಮೊಂದಿಗೆ ಹಂಚಿಕೊಂಡಿರುವ, ಮೂಲ ಮುಖ್ಯವಾದ ಶೋಧನೆ ದೇವರನ್ನು ದೇವರಿಗಿಂತ ಕಡಿಮೆಯಾಗಿ ಪ್ರತಿಪಾದಿಸುವದೇ ಆಗಿದೆ."[26] ನಿರ್ದಿಷ್ಟವಾಗಿ, ನಮ್ಮ ಜೀವನದಲ್ಲಿ ಈ ಎಲ್ಲಾ ಹೋರಾಟಗಳೊಂದಿಗೆ ಗುರುತಿಸಿ ಕೊಳ್ಳಬಹುದು.

ಅದು ಅಲ್ಲದೆ, ಇನ್ನೂ ಬಹಳ ಹತ್ತಿರವಾಗಿ ಯೇಸುವಿನ ಶೋಧನೆಗಳನ್ನು ನೋಡುವಾಗ, ನಮ್ಮ ಸ್ವಂತ ಪರಿಸ್ಥಿತಿಗಳಲ್ಲಿ ಅದಕ್ಕೆ ಸರಿಸಮವಾದ ವಿಷಯಗಳನ್ನು ಕಂಡುಕೊಳ್ಳಬಹುದು. (1) ಯೇಸುವಿನ ಬಲಹೀನತೆ ಮತ್ತು ಹಸಿವಿನ ಸಮಯದಲ್ಲಿ ಸೈತಾನನು ಆತನ ಹತ್ತಿರ ಬಂದು, ನ್ಯಾಯಸಮ್ಮವಾದ ಮಾರ್ಗದಿಂದ ತೃಪ್ತಿಹೊಂದುವ ಬದಲಾಗಿ ಅನ್ಯಾಯ ಮಾರ್ಗದಿಂದ ತೃಪ್ತಿಹೊಂದಲು ಸೈತಾನನು ಶೋಧಿಸುತ್ತಾನೆ (4:3). ಸೈತಾನನು ಅದೇ

ಯೋಜನೆಯನ್ನು ನಮ್ಮನ್ನು ಶೋಧಿಸಲು ಉಪಯೋಗಿಸುತ್ತಾನೆ - ಕಳ್ಳತನ, ವ್ಯಭಿಚಾರ, ಅಥವಾ ಇನ್ನು ಬೇರೆ ದುರ್ಮಾರ್ಗಗಳಿಂದ ನಮ್ಮನ್ನು ಶೋಧಿಸುತ್ತಾನೆ. (2) ಯೇಸು ತನ್ನ ಗುರುತು ರುಜುವಾತು ಪಡಿಸಲು ಸೈತಾನನು ಶೋಧಿಸಿದನು (4:5, 6). ಅವನು ಇಂದಿಗೂ ಸಹ ನಮ್ಮ ಮೇಲೆ ಗರ್ವದ ಮನಸ್ಸನ್ನು ಇಟ್ಟು ಇತರರಿಗಿಂತಲೂ ನಾವು ಹೆಚ್ಚಿನವರು ಎಂದು ತೋರಿಸಲು ಅವರಿಗೆ ನೋವು ಮಾಡುವ ಮಾತುಗಳನ್ನಾಡುವಂತೆ, ಮುರ್ಖತನದ ಸಾಹಸ ಕಾರ್ಯಮಾಡುವಂತೆ ನಮ್ಮನ್ನು ಶೋಧಿಸುತ್ತಾನೆ. (3) ಯೇಸು ಸರಳವಾದ ಮಾರ್ಗದ ಮುಖಾಂತರ ಶಿಲುಬೆ ಇಲ್ಲದೆ ಕಿರೀಟ ಹೊಂದಲು ಸೈತಾನನು ಶೋಧಿಸಿದನು (4:8, 9). ಅವನು ನಮ್ಮ ನೀತಿತತ್ವದೊಂದಿಗೆ ರಾಜಿಯಾಗಲೂ, ಕನಿಷ್ಟವಾದ ಹೋರಾಟ ಮಾಡಲು ನಮ್ಮನ್ನು ಶೋಧಿಸುತ್ತಾನೆ. ಅದು ನೀವು ಬರೆದಿರುವ ಪರೀಕ್ಷೆಯಲ್ಲಿ ಮೋಸ ಮಾಡುವ ಕಾರ್ಯ ಆಗಿರಬಹುದು, "ನಯವಾದ ಸುಳ್ಳು," ಅಥವಾ ಕೆಲವು ಅನಿವಾರ್ಯ ಕಾರ್ಯಗಳನ್ನು ನೆರವೇರಿಸದೆ ಬಿಡುವದು ಸಹ ಆಗಿರುತ್ತದೆ.

ಯೇಸುವಿನಂತೆ ನಾವು ಸಹ ನಂಬಿಗಸ್ತ ಮಕ್ಕಳಾಗಿರಲು ಕರೆಯಲ್ಪಟ್ಟಿದ್ದೇವೆ (ನೋಡಿರಿ ಗಲಾತ್ಯ 3:26-29). ಕ್ರಿಸ್ತನಂತೆ ನಾವು ಮಾಡದೆ, ನಾವು ಕೆಲವು ಸಾರಿ ನಮಗೆ ಬರುವ ಶೋಧನೆಗಳಿಗೆ ಬಲಿಯಾಗುತ್ತೇವೆ. ಸುದೈವದಿಂದ, "ಸರ್ವವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು," ಆದ್ದರಿಂದ "ನಮ್ಮ ನಿರ್ಬಲಾವಸ್ಥೆಯಲ್ಲಿ ಆತನು ಅನುತಾಪ ಹೊಂದಲು" ನಮಗೆ ಶ್ರೇಷ್ಟ ಮಹಾಯಾಜಕನು ನಮಗಿದ್ದಾನೆ. ಆತನು "ಪಾಪ ರಹಿತ"ನಾಗಿದ್ದರಿಂದ ತಂದೆಯ ಪ್ರಸನ್ನತೆಯಲ್ಲಿ ಸೇರಲು ನಮ್ಮನ್ನು ಅರ್ಹರನ್ನಾಗಿ ಮಾಡಿದನು (ಇಬ್ರಿಯ 4:14-16).

David Stewart

## ಮೌನ ಮತ್ತು ಏಕಾಂತತೆಯ ಶಿಸ್ತುಪಾಲನೆ (4:1-11)

ನಾವು ಶಬ್ದ ಮಾಲಿನ್ಯ, ಬಿಡುವಿಲ್ಲದ ಲೋಕದಲ್ಲಿದ್ದೇವೆ, ಆದ್ದರಿಂದ ನಾವು ಮೌನದ ಶಿಸ್ತನ್ನು ಅಭಿವೃದ್ಧಿಪಡಿಸುವದು ಅವಶ್ಯಕವಾಗಿದೆ. ಎಲ್ಲಿ ಜನವಿಲ್ಲವೋ ಎಲ್ಲಿ, ಮಾತನಾಡದ ಸ್ಥಳವಿದೆಯೋ ಅಲ್ಲಿರಲು ಯೋಚಿಸಬೇಕು, ಮತ್ತು ದೂರದರ್ಶನ ಯಂತ್ರ, ರೇಡಿಯೋ, ಧ್ವನಿ ಮುದ್ರಣ ಹಾಡುಗಳಿಲ್ಲ, ಅಥವಾ ದೂರವಾಣಿ ಯಂತ್ರಗಳಿಲ್ಲದ ಸ್ಥಳಗಳಿಂದ ದೂರವಾಗಿ, ನಮ್ಮ ಸುತ್ತಾಮುತ್ತಾ ಇರುವ ಲೋಕದಿಂದ ದೂರವಿರಲು ಕೆಲವು ಸಾರಿ ನಾವು ಆಲೋಚಿಸಬೇಕಾಗಿದೆ. ಈ ಎಲ್ಲಾ ಯಂತ್ರಗಳು ಇರದ ಹೊರತಾಗಿ ನಾವು ಹೇಗೆ ಜೀವಿಸಬಹುದು?

ನಾವು ಏಕಾಂತತೆಯ ಶಿಸ್ತನ್ನು ಅಭ್ಯಾಸ ಮಾಡಲೇಬೇಕು. ಎಲ್ಲಾ ಕಡೆಯಿಂದ ಬಾಗಿಲು "ಮುಚ್ಚಿರುವ" ಸ್ಥಳಕ್ಕೆ ಹೋಗಬೇಕು ಅಲ್ಲಿ ಯಾವುದೇ ಅಡ್ಡಿಗಳು ಆತ್ಮೀಕ ವಿಷಯಗಳ ಮೇಲೆ ಧ್ಯಾನ ಮಾಡುವದು ಮತ್ತು ಪ್ರಾರ್ಥನೆ ಮಾಡುವದರಲ್ಲಿ ಸಮಯ ಕಳೆಯ ಬೇಕು.

ನಾವು ಯಾಕೆ ಈ ಶಿಸ್ತು ಪಾಲನೆ ಅಭ್ಯಾಸ ಮಾಡಬೇಕು? ಇಲ್ಲಿ ಕೆಲವು ಕಾರಣಗಳಿವೆ:

1. ಯೇಸು ಸ್ಥಾಪಿಸಿದ ಉದಾಹರಣೆಗಳನ್ನು ನಾವು ಹಿಂಬಾಲಿಸುವೆವು (4:1; ಮಾರ್ಕ 1:35; ಲೂಕ 4:42).
2. ನಾವು ದೇವರಿಗೆ ಹತ್ತಿರವಾಗುತ್ತಿರಬೇಕು (ಕೀರ್ತನೆ 46:10; ಯಾಕೋಬ 4:7, 8).
3. ನಾವು ಮಾನಸಿಕವಾಗಿ, ದೈಹಿಕವಾಗಿ, ಆತ್ಮೀಕವಾಗಿ, ಮತ್ತು ಭಾವನಾತ್ಮಕವಾಗಿ ಬಲಪಡಿಸಲ್ಪಡಬೇಕು (ಲೂಕ 2:52).
4. ನಮ್ಮ ಜೀವಿತಕ್ಕಾಗಿ ದೇವರ ಚಿತ್ತವನ್ನು ತಿಳಿದುಕೊಳ್ಳಲು ನಾವು ಸಮಯವನ್ನು ಕಳೆಯುತ್ತಿರಬೇಕು.

5. ನಮಗೆ ಗೊತ್ತಿರದ ಸಂಗತಿಯನ್ನು ಉತ್ತಮವಾಗಿ ಎದುರಿಸಬಹುದು.

---

ಟಿಪ್ಪಣಿಗಳು

[1]Robert H. Mounce, *Matthew*, New International Biblical Commentary (Peabody, Mass.: Hendrickson Publishers, 1991), 28. [2]Graham H. Twelftree, "Temptation of Jesus," in *Dictionary of Jesus and the Gospels*, ed. Joel B. Green and Scot McKnight (Downers Grove, Ill.: InterVarsity Press, 1992), 824-25. [3]Douglas R. A. Hare, *Matthew*, Interpretation (Louisville: John Knox Press, 1993), 24. [4]R. T. France, *The Gospel According to Matthew*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 97. [5]Jack P. Lewis, *The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 67. [6]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 793. [7]John MacArthur, Jr., *The MacArthur New Testament Commentary: Matthew 1-7* (Chicago: Moody Press, 1985), 87. [8]H. Leo Boles, *A Commentary on the Gospel According to Matthew* (Nashville: Gospel Advocate Co., 1936), 96. [9]ಅತಿಯಾದ ಉಪವಾಸದ ವೇದನೆ ಜನರನ್ನು ಅಯೋಗ್ಯಕ್ಕೆ ನಡಿಸುತ್ತದೆ. ಆಶ್ಚರ್ಯವಾಗುವಾಗುವ ಮತ್ತು ವಿಕಾರ ಚಿತ್ರವಾಗಿರುವ ಸಮಾರ್ಯದಲ್ಲಿ ಬರಗಾಲದಲ್ಲಿ ತನ್ನ ಸ್ವಂತ ಮಗುವನ್ನೇ ತಿನ್ನುವ ದೃಷ್ಟಾಂತ ಭಯಂಕರವಾಗಿದೆ (2 ಅರಸುಗಳು 6:28, 29). [10]Leon Morris, *The Gospel According to Matthew*, Pillar Commentary (Grand Rapids, Mich.: Wm. B. Eerdmans Publishing Co., 1992), 74.

[11]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 56. [12]Lewis, 69. [13]Josephus *Antiquities* 15.11.5. [14]*Pesiqta Rabbati* 36; Twelftree, 823 ರಲ್ಲಿ ಉಲ್ಲೇಖಿಸಲಾಗಿದೆ. [15]Gundry, 56. [16]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 230. [17]Morris, 76. [18]Donald A. Hagner, *Matthew 1-13*, Word Biblical Commentary, vol. 33A (Dallas: Word Books, 1993), 67. [19]Albert Barnes, *Notes on the New Testament: Matthew and Mark*, ed. Robert Frew (Philadelphia: N.p., 1832; reprint, Grand Rapids, Mich.: Baker Book House, 1974), 35. [20]Jack P. Lewis "ಮನುಷ್ಯರನ್ನು ಆರಾಧಿಸುವದು (ಅಪೊಸ್ತಲರ ಕೃತ್ಯಗಳು 10:26) ಮತ್ತು ದೇವದೂತರನ್ನು ಆರಾಧಿಸುವುದು (ಪ್ರಕಟಣೆ 19:10) ನಿಷೇಧಿಸಲಾಗಿದೆ; ಸೈತಾನನ ಆರಾಧನೆ ಬಹಳಮಟ್ಟವಾಗಿ ನಿಷೇಧಿಸಲಾಗಿದೆ!" ಎಂದು ಬರೆದರು. (Lewis, 70.)

[21]Morris, 78. [22]Guy N. Woods, "Questions and Answers," *Gospel Advocate* (17 June 1982): 358. [23]ಈ ಸಂಗ್ರಹದಲ್ಲಿರುವ ಪಟ್ಟಿಯು Jack Wilhelm, "Lessons from the Temptation of Jesus," *RSVP Newsletter* 154-10-83-37 (1983) ಆರಿಸಿಕೊಳ್ಳಲಾಗಿದೆ. Jack Wilhelm, P.O. Box 2222, Florence, AL 35630 ಅನುಮತಿಯೊಂದಿಗೆ ಬಳಸಲಾಗಿದೆ. [24]ಮಾರ್ಕ 1:12, 13 ಮತ್ತು ಲೂಕ 4:1-13ರಲ್ಲಿ ಯೇಸುವಿನ ಶೋಧನೆಗಳು ದಾಖಲಾಗಿವೆ. [25]Boles, 95. [26]Hare, 26.